ಅಪರಂಜಿ

ಮಾರ್ಚ್ 2000

ತಿಳಿನಗೆಯ ಕಾರಂಜಿ



ಪ್ರಕಾಶ್

ಶಿವು

ಎಚ್. ಗೋಪಾಲಕೃಷ್ಣ

ಅನಾಜಿ

ಕುಮುದಾ ಪುರುಷೋತ್ತಮ್

ಬಾಗೂರು ಚಂದ್ರು

ನೀರಗುಂದ ಕೇಶವಮೂರ್ತಿರಾವ್

ಈರಪ್ಪ ಎಂ. ಕಂಬಳಿ

ಎಂ.ಎಸ್.ಕೆ.

ಬೇಲೂರು ರಾಮಮೂರ್ತಿ

ಬಿಡಿ ಪ್ರತಿ: ರೂ. 5.00



ಗೌರವ ಸಲಹೆಗಾರರು:
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್
ನಿರ್ವಹಣೆ:
ಬೇಲೂರು ರಾಮಮೂರ್ತಿ
ಕೃಷ್ಣ ಸುಬ್ಬರಾವ್

ಚಂದಾ ವಿವರ:
ಬಿಡಿ ಪ್ರತಿ: ರೂ. 5.00
ವಾರ್ಷಿಕ ಚಂದಾ: ರೂ. 60
ಹತ್ತು ವರ್ಷದ ಚಂದಾ : ರೂ. 500
Ph: 3345259
email: aparanji@hotmail.com

ವಿಳಾಸ : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 17 ಮಾರ್ಚ್ - 2000 ಸಂಚಿಕೆ -6

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3 ಅಕ್ಷರ ಜೋಡಣೆ: ಒಮೇಗಾ ಲೇಸರ್ ಟೆಕ್, ಬೆಂಗಳೂರು 27

ವೀರಪ್ಪನ್ ಹಿಡಿಯಲು ಇರುವವರೇ ಅವನಿಗಿಂತ ಹೆಚ್ಚು ಅಮಾನವೀಯತೆ ತೋರಿಸಿದ್ದಾರೆ ಎಂದು ಅಪರಂಜಿ ಮರುಗಿದಳಂತೆ !

★★★

ಆಫ್ಘನ್ ವಿಮಾನ ಅಪಹರಣ; ಧಾಳಿ ನಡೆಸಲು ತಾಲಿಬಾನ್ ಸಲಹೆ

- ಸುದ್ದಿ

ತಾಳಿದವನು ಬಾಳಿಯಾನು !!

★★★

ಸಕ್ಕರೆ ಆಮದು ಸುಂಕ ಹೆಚ್ಚಳ

- ಸುದ್ದಿ !!

ಕಹಿ ಸುದ್ದಿ !!


★★★

ರಿಸರ್ವ್ ಬ್ಯಾಂಕ್ ಸಿಬ್ಬಂದಿ ಗಾತ್ರ ಇಳಿಕೆ ವಿರುದ್ಧ ಹೋರಾಟಕ್ಕೆ ಕರೆ

- ಪತ್ರಿಕೆ

ನಂ ತರಹ ಸಣ್ಣಗಿರುವವರೂ ಹೋರಾಟಕ್ಕೆ ಸೇರಬಹುದೆ ??

★★★



ಎಂ.ಎಸ್.ಕೆ. ಪ್ರಭು

ಐ ವೀಪ್ ಫಾರ್ ಆಡೊನೇ, ಹಿ ಈಸ್ ಡೆಡ್

- ಷೆಲ್ಲಿ

ಸುಮಾರು ಇಪ್ಪತ್ತು ವರ್ಷಗಳ ಕೆಳಗೆ ನನ್ನ ಪರಿಚಿತರೊಬ್ಬರು 'ಪ್ರಭು ಬಂದಿದ್ದರು. ನಿಮ್ಮನ್ನು ಕೇಳಿದರು. ನಿಮ್ಮ ಲೇಖನಗಳನ್ನು ಬಹಳ ಹೊಗಳಿದರು. ಕನ್ನಡದ ಒಬ್ಬ ಅಗ್ರಮಾನ್ಯ ಲೇಖಕರಿಗಿಂತಲೂ ನೀವು ಹೆಚ್ಚು ಚೆನ್ನಾಗಿ ಬರೆಯುವಿರಿ' ಎಂದರು ಎಂದು ಹೇಳಿದರು. ಕೆಲವೇ ದಿನಗಳಲ್ಲಿ ಅವರ ಭೇಟಿ ಆಯಿತು. ಆತ್ಮೀಯತೆ ತಕ್ಷಣವೇ ಬೆಳೆಯಿತು.

ಮಂದಗೆರೆ ಸೀತಾರಾಮಯ್ಯ ಕೇಶವ ಪ್ರಭು ಎನ್ನುವುದು ಅವರ ಹೆಸರು. 'ಬಕ' ದ ಕರ್ತೃ ಎಂಬುದೇ ಅವರ ಖ್ಯಾತಿಗೆ ಕಾರಣ.

ಅವರು ಫ್ಯಾಂಟಸಿ ಬರೆದರು, ವಿಮರ್ಶೆ ಬರೆದರು. ನಾಟಕ ಬರೆದರು. ಎಲ್ಲಕ್ಕಿಂತ ಹೆಚ್ಚಾಗಿ (ನನ್ನ ಅಭಿಪ್ರಾಯದಲ್ಲಿ) ತಿಳಿನಗೆಯನ್ನು ಸೃಷ್ಟಿಸಿದರು.

ಆಕಾಶವಾಣಿಯ ಕಾರ್ಯಕ್ರಮ ನಿರ್ವಾಹಕರಾಗಿ ಧಾರವಾಡ, ಭದ್ರಾವತಿ, ಬೆಂಗಳೂರುಗಳಲ್ಲಿ ಸೇವೆ ಸಲ್ಲಿಸಿದ ಅವರು ಸಹ ನಿಲಯ ನಿರ್ದೇಶಕರಾಗಿ ನಿವೃತ್ತರಾದರು. ಮೈಸೂರಿನಲ್ಲಿ ನೆಲೆಸಿ ಅಲ್ಲಿಯೇ ಪರಮಾತ್ಮನ ಪಾದಾರವಿಂದಗಳನ್ನು ಸೇರಿದರು.

ಅವರ 'ವಿರೋಧ ವಿಲಾಸ'ದ ಅವಲೋಕನೆಯನ್ನು ಕಳೆದ ತಿಂಗಳು ತಾನೇ ಅಪರಂಜಿಯಲ್ಲಿ ನೋಡಿದ್ದೆ. ಪೂರ್ಣ ಸಹಮತಿ ವ್ಯಕ್ತಪಡಿಸಿದ್ದೆ. ಅವರ ನಿಧನ ಕನ್ನಡ ನಾಡಿನ ಸಾಹಿತ್ಯಕ್ಕೆ ಅಪಾರ ನಷ್ಟವನ್ನುಂಟುಮಾಡಿದೆ.

'ಅಪರಂಜಿ'ಯ ಉದ್ಘಾಟನೆಯಲ್ಲಿ ಅವರು ಮುಖ್ಯ ಅತಿಥಿಗಳು. ಕನ್ನಡ ಹಾಸ್ಯದ ಅನೇಕ ಪ್ರಬುದ್ಧ ಲೇಖನಗಳನ್ನು ಅಪರಂಜಿಗಾಗಿ ಬರೆದರು.

'ಪರಮಾರ್ಥ ಪದಕೋಶ'ಕ್ಕಾಗಿ ಅವರು ಕನ್‌ಫ್ಯೂಷಿಯಸ್, ಲಾವೊತ್ಸೆ ಯೆಹೂದಿ ಧರ್ಮಗಳನ್ನು ಕುರಿತ ಲೇಖನಗಳನ್ನು ಬರೆದರು. ಒಂದೊಂದೂ ಒಂದು ಅನರ್ಘ್ಯ ಬರೆಹ.

ಅವರ ತಾಯಿ, ತಮ್ಮ, ಸಹೋದರಿಯರ, ಮಿತ್ರರ ದುಃಖದಲ್ಲಿ ಅಪರಂಜಿಯು ಸಹಭಾಗಿ.

- ಅ.ರಾ.ಸೇ.

ಕಾಸ್ಟನೇಡಾ ಕ್ಲಬ್ ಗಳಿರುವುದು ತಿಳಿಯಿತು. ನಾನು ಈ ಹಿಂದೆ ಕಾರ್ಲೋಸ್ ಕಾಸ್ಟನೇಡಾ ಹಾಗೂ ಅವನ ಗುರು ಡಾನ್‌ವಾನ್ ಕುರಿತು ಹಲವು ಬರಹಗಳನ್ನು ಅಪರಂಜಿಯ ಓದುಗರಿಗೆ ಪರಿಚಯಿಸಿದ್ದ ನೆನಪು. ಅದು ಹೇಗೇ ಇರಲಿ ಹಲವು ಗೆಳೆಯ, ಗೆಳತಿಯರ ನೆರವಿನಿಂದ ಈ ಕುರಿತು ಒಂದು ಪುಸ್ತಕ ತರುವ ಆಲೋಚನೆ ಇದೆ. (Is it a threat or a promise? ಎಂದು ಮಾತ್ರ ಕೇಳಬೇಡಿ)

ಹಾಸ್ಯಪ್ರಿಯರಿಗೊಂದು ಒಳ್ಳೆಯ ಸಮಾಚಾರ. (ಅಪರಂಜಿ ಓದುಗರೆಂದಮೇಲೆ ಅವರು ನಗೆ ರಸಿಕರೇ ಆಗಿರಬೇಕಲ್ಲವೇ) ಪ್ರತಿ ಸೋಮವಾರ ಸಂಜೆ ಆರೂವರೆಗೆ ಸ್ಟಾರ್ ವರ್ಲ್ಡ್ ಛಾನೆಲ್ಲಿನಲ್ಲಿ ಒಂದು ಅತ್ಯಂತ ತಮಾಷೆಯಿಂದ ಕೂಡಿದ, ಹಾಗೆಯೇ ಅತಿ ಪ್ರಬುದ್ಧವಾದ ನಗೆ ಕಾರ್ಯಕ್ರಮ ಮೂಡಿ ಬರುತ್ತಿದೆ. Whose line is it anyway? ಎಂಬ ಹೆಸರಿನ ಈ ಕಾರ್ಯಕ್ರಮವನ್ನು ವಿವರಿಸುವುದು ಕಷ್ಟ. ನೋಡಿಯೇ ಸವಿಯಬೇಕು. ಅತಿ ತೀಕ್ಷ್ಣವಾದ ಬುದ್ಧಿಯೊಂದಿಗೆ ಹರಿತವಾದ ಹಾಸ್ಯ ಪ್ರಜ್ಞೆ ಕೂಡಿದರೆ ಏನಾಗುತ್ತದೆಂದು ತಿಳಿಯಬೇಕಾದರೆ ನೀವು ಖಂಡಿತ ಈ ಕಾರ್ಯಕ್ರಮ ನೋಡುವುದು ಅಗತ್ಯ.

ಡಿ.ವಿ.ಜಿ.ಯವರ ಮಂಕುತಿಮ್ಮ ಯಾರಿಗೆ ತಿಳಿದಿಲ್ಲ. ''ನಗುವು ಸಹಜದ ಧರ್ಮ...'' ಎಂದು ನಮ್ಮ ಪತ್ರಿಕೆಗೆ ಒಂದು ಧ್ಯೇಯವನ್ನು ನೀಡಿದ ಈ ಕಗ್ಗಕ್ಕೆ ಈಗ ಕೈಪಿಡಿಯೊಂದು ಸಿದ್ಧವಾಗಿದೆ. ಮಾನ್ಯ ಡಿ.ಆರ್. ವೆಂಕಟರಮಣನ್ ಅವರು ಬರೆದಿರುವ ಈ ಪುಸ್ತಕ ಆಸಕ್ತ ಓದುಗರಿಗೆ ನಿಜಕ್ಕೂ ಒಂದು ಅಪೂರ್ವ ಬಳುವಳಿ. ಮಾರ್ಚ್ 19ರ ಭಾನುವಾರ, ಬುಲ್ ಟೆಂಪಲ್ ರಸ್ತೆಯಲ್ಲಿನ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯಲ್ಲಿ ಈ ಪುಸ್ತಕದ ಬಿಡುಗಡೆ ಆಗಲಿದೆ. ಈ ಕುರಿತು ವಿವರಗಳನ್ನು ತಿಳಿಸುವ ಜಾಹಿರಾತೊಂದನ್ನು ಈ ಸಂಚಿಕೆಯಲ್ಲೇ ನೀಡಿದ್ದೇವೆ. ಆಸಕ್ತರು ಇದರ ಪೂರ್ಣ ಪ್ರಯೋಜನ ಪಡೆಯಬಹುದು.

- ಶಿವಕುಮಾರ್

... ಹೈಜಾಕ್ ಪ್ರಕರಣವು

– ಎಚ್ ಗೋಪಾಲಕೃಷ್ಣ

ಕಳೆದ ತಿಂಗಳು ನಡೆದ ವಿಮಾನದ ಹೈಜಾಕ್ ಪ್ರಸಂಗ ಇಡೀ ದೇಶದ ಅಲ್ಲ ಇಡೀ ಪ್ರಪಂಚದ ಗಮನ ಸೆಳೆದದ್ದು ನಿಮಗೆ ಗೊತ್ತು. ಹೈಜಾಕ್ ಮಾಡಿದವರಿಗೆ ನಾವು ನೀವೆಲ್ಲ ಹಿಡಿ ಹಿಡಿ ಶಾಪ ಹಾಕಿದ್ದು, ಹೈಜಾಕ್ ನಡೆದ ನಂತರ ಹೈಜಾಕ್ ಆದವರ ಕುಟುಂಬದಲ್ಲಿ ನಡೆದ ಅಲ್ಲೋಲ ಕಲ್ಲೋಲ ಇವೆಲ್ಲಾ ಈಗ ಹಳೇಕತೆ. ಸರಿಸುಮಾರು ಇದೇ ಸಮಯದಲ್ಲಿ ನಡೆದ ಮತ್ತೊಂದು ಹೈಜಾಕ್ ಕತೆ ಇಡೀ ದೇಶ ಇರಲಿ, ಇಡೀ ಕರ್ನಾಟಕ ಇರಲಿ ನಮ್ಮ ವಿದ್ಯಾರಣ್ಯಪುರದ ಒಂದೇ ಒಂದು ಗಲ್ಲಿಯಲ್ಲೂ ಪ್ರಸ್ತಾಪವಾಗದೇ ಪ್ರಸಾರವಾಗದೇ ಹಾಗೇ ಉಡುಗಿ ಹೋಯಿತು. ಅಂತಹ ಒಂದು ಹೈಜಾಕ್ ಪ್ರಸಂಗವನ್ನ ತಮಗೆ ವಿವರಿಸಲೇಬೇಕು ಮತ್ತು ಈ ಚರಿತ್ರಾರ್ಹ ಘಟನೆ ದಾಖಲೆಗೆ ಸೇರಲೇಬೇಕು. ಈ ಹೈಜಾಕ್ ಪ್ರಸಂಗ ವಿವರಿಸುವ ಮುನ್ನ ಒಂದು ಸಣ್ಣ ಹಿನ್ನೆಲೆ - ಇದಕ್ಕೆ ಇಂಗ್ಲೀಷ್ ಕಾದಂಬರಿಗಳಲ್ಲಿ ಪ್ರಲೋಗು ಅಂತ ಹೇಳುತ್ತಾರಂತೆ - ತಮಗೆ ನೀಡಿ ನಂತರ ಪ್ರಸಂಗದ ವಿವರಕ್ಕೆ ತಮ್ಮ ಅನುಮತಿಯಿಂದ ಬರುತ್ತೇನೆ.

ನಮ್ಮ ವಿದ್ಯಾರಣ್ಯಪುರದಲ್ಲಿ ಹೆಚ್ಚೂಕಡಿಮೆ ಸಾವಿರದ ಎರಡುನೂರು ಕ್ರಿಕೆಟ್ ಟೀಮುಗಳು ಇವೆ. ಇವುಗಳಲ್ಲಿ ಅಂಡರ್‌ಸಿಕ್ಸ್, ಅಂಡರ್ ಎೖಟ್ಸ್, ಅಂಡರ್‌ಟೆನ್ ಹೀಗೆ ತಲಾ ಎರಡು ವರ್ಷಗಳ ಅಂತರ ಅಂತರದಲ್ಲಿ ಅಂಡರ್ ಫಿಫ್ಟಿವರೆಗೆ ಟೀಮುಗಳು ಇರುವುದು ಶೇ. 94 ರಷ್ಟು. ಉಳಿದ ಶೇ. ಆರರಷ್ಟು ಟೀಮುಗಳು ಅಬೋವ್ ಫಿಫ್ಟಿ, ಅಬೋವ್ ಫಿಫ್ಟಿಫೈವ್ ಅಬೋವ್ ಸಿಕ್ಸ್ಟಿ ಮತ್ತು ಅಬೋವ್ ಸೆವೆಂಟಿಫೈವ್ ಹೀಗೆ ಹಂಚಿ ಹೋಗಿವೆ. ಈ ರೀತಿ ವ್ಯವಸ್ಥೆ ಯಾಕೆ ಮಾಡಿಕೊಂಡಿದೀರಿ? ಇಡೀ ವಿದ್ಯಾರಣ್ಯಪುರಕ್ಕೆ ಎರಡೋ ಮೂರು ಟೀಮು ಮಾಡಿಕೊಂಡು ಮಿಕ್ಕಿದ್ದಕ್ಕೆಲ್ಲಾ ಗೇಟ್ ಪಾಸ್ ನೀಡಬಾರದೇ ಅಂತ ನೀವು ಕೇಳುವಿರಿ ಅಂತ ನನಗೆ ಗೊತ್ತು. ನೀವು ಹೇಳಿದ ಹಾಗೆ ಇಡೀ ವಿದ್ಯಾರಣ್ಯಪುರಗಳ ಮೂರು ಟೀಮು ಮಾಡಲು ನಮಗೊಂದು ರೀತಿಯ ಟೆಕ್ನಿಕಲ್ ಪ್ರಾಬ್ಲಮ್ಮು ಇದೆ. ಆ ಟೆಕ್ನಿಕಲ್ಲು ಏನಪ್ಪಾ ಅಂದರೆ ಟೀಮಿನ ಪ್ರತಿಯೊಬ್ಬ ಆಟಗಾರನೋ (ಇವರು ನಲವತ್ತು ಎಪ್ಪತ್ತರ ಗುಂಪಿನ ಟೀಂ ಪ್ಲೆಯರ್ಸು) ಅಥವಾ ಆಟಗಾರನ ಮನೆಯವರೋ (ಇವರು ಬಿಲೋ ಫಾರ್ಟಿ ಗುಂಪಿನವರು - ಅದರಲ್ಲೂ ಬಿಲೋ ಟ್ವೆಂಟಿ ಟೀಮಿನವರ ಮನೆಯವರು) ನಮ್ಮ ಟೀಮುಗಳ ಏಳ್ಗೆಗೆ ಒಂದಲ್ಲ ಒಂದು ರೀತಿ ಸಹಾಯ ಮಾಡುತ್ತಲೇ ಬಂದಿರುವಂತಹ ನಾಗರಿಕರು. ಒಬ್ಬರು

ಗ್ರೌಂಡಿಗೆ ಕುಡಿಯುವ ನೀರು ಒದಗಿಸಿದರೆ ಮತ್ತೊಬ್ಬರು ಚಾ ಒದಗಿಸುತ್ತಾರೆ. ಎಂಟು ಹತ್ತು ಮನೆಯವರು ಸೇರಿ ನಮ್ಮ ಪ್ಲೇಯರ್ರುಗಳಿಗೆ ಮಧ್ಯಾಹ್ನದ ತಿಂಡಿಗೆ ಪುಳಿಯೋಗರೆ, ಮೊಸರನ್ನ ಒದಗಿಸುತ್ತಾರೆ. ಈ ರೀತಿ ಒದಗಿಸುವಾಗಲೂ ಒಬ್ಬರು ಸಾಸಿವೆ, ಒಬ್ಬರು ಕರಿಬೇವಿನ ಸೊಪ್ಪು ಮತ್ತೊಬ್ಬರು ನೆಲಗಡಲೆ, ಐದಾರು ಜನ ಸೇರಿ ಅಕ್ಕಿ, ನಾಲ್ಕೈದು ಜನ ಸೇರಿ ಮೊಸರು - ಕೊತ್ತಂಬರಿ ಹೀಗೆ ಒದಗಿಸುತ್ತಾರೆ. ಯಾವುದೇ ಪ್ಲೇಯರ್‌ನ ಕಿತ್ತು ಹಾಕಿದರೂ ಅಥವಾ ತಂಡಗಳನ್ನು ಮಿತಿಗೊಳಿಸಿದರೂ ಈ ಸ್ಪಾನ್ಸರ್ರುಗಳು ಕೈತಪ್ಪಿ ಹೋಗುತ್ತಾರೆಂಬ ಭಯ ನಮಗಿದ್ದೇ ಇದೆ. ಹಾಗಾಗಿ ಅಂಡರ್ ಫಾರ್ಟಿ ಟೀಮನ್ನು ನಾವು ಹದಿನೈದು ಅಡಿ ಉದ್ದದ ಗಡುವಿನಿಂದಲೂ ಸೋಕಿಸುವ ಹಾಗಿಲ್ಲ. ಇನ್ನ ಅಬೋವ್ ಫಾರ್ಟಿಗೆ ಬಂದಿರೋ - ಇವರೆಲ್ಲಾ ಒಂದು ರೀತಿ ಮನೆಯ ಹೆಂಡತಿಯ ಅರಿವಿಗೆ ಬಾರದ ಹಾಗೆ ಬಾಲು ಬ್ಯಾಟು ವಿಕೆಟ್ಟು ಬೇಲ್ಸು ಪ್ಯಾಡು ಮೊದಲಾದ ಕ್ರಿಕೆಟ್ ಆಯುಧಗಳಿಗೆ ಹಣ ನೀಡುತ್ತಿರುವ ಜನ. ಯಾರಾದರೂ ಒಬ್ಬರನ್ನು ಎದುರು ಹಾಕಿಕೊಂಡರೂ ನಮ್ಮ ಸಲಕರಣೆಗಳಿಗೇ ಕೊರತೆ ಬೀಳುವ ಭಯ. ಅದರಿಂದ ಇಷ್ಟೂ ಟೀಮುಗಳನ್ನೂ ಸಹಿಸಿದ್ದೇವೆ, ಸಹಿಸುತ್ತಿದ್ದೇವೆ ಮತ್ತು ಸಹಿಸುತ್ತೇವೆ ಸಹಾ ಎಂದು ಹೇಳಲೇಬೇಕು. ಅಬೋವ್ ಸಿಕ್ಸ್ಟಿ ಟೀಮಿನಲ್ಲಿರುವವರೇ ಆರೇಳು ಜನ. ಹಿರಿಯರು ಅಂತ ಇವರಿಗೆ ಗೌರವ. ಇವರು ಮಿಕ್ಕವರ ಹಾಗಲ್ಲದೇ ಸ್ವತಂತ್ರವಾಗಿ ತಮಗೆ ತೋಚಿದಷ್ಟು ನಾವು ಕೀಳಲು ಶಕ್ತರಾಗಿರುವಷ್ಟು ಪೀಕುನವರು. ನಮ್ಮ ಮೈನ್ ರಿಸೋರ್ಸ್ ಅಂದರೆ ಇವರೇ. ವರ್ಷಕ್ಕೆ ನೂರು ಇನ್ನೂರು ಕೊಡುವ ಇವರ ಮಾತಿಗೆ ನಮ್ಮ ಥಿಂಕ್‌ಟ್ಯಾಂಕಿನಲ್ಲಿ ಅತಿ ಪ್ರಾಶಸ್ತ್ಯ. ಅದರಿಂದಾಗಿ ಇವರನ್ನ ಹಿಡಿದರೆ ಟೀಮಿನಲ್ಲಿ ಛಾನ್ಸ್ ಗಿಟ್ಟಿಸಬಹುದು ಎಂಬ ಗುಮಾನಿ ಸಹ ಕೆಲವರಲ್ಲಿ ಇದೆಯಂತೆ. ಇದು ನಿಜವಿದ್ದರೂ ಇರಬಹುದು, ನಿಜವಲ್ಲದಿದ್ದರೂ ಇರಬಹುದು - ನಮಗೆ ತಿಳಿಯದ ಸಂಗತಿ. ಇದು ಹಿನ್ನೆಲೆ.

ಹೈಜಾಕ್ ಪುರಾಣದ ಮೊದಲ ಪುಟ ಆರಂಭವಾಗುವುದು ಮೂರುವಾರದ ಹಿಂದೆ ನಮ್ಮ ಸುವರ್ಣ ಮಹೋತ್ಸವ ಸ್ವಾತಂತ್ರ್ಯದ ಕ್ರೀಡಾಂಗಣದಲ್ಲಿ ಒಂದು ಮಿನಿ ವರ್ಲ್ಡ್‌ಕಪ್ ಪಂದ್ಯ ಏರ್ಪಡಿಸಿದಾಗ. ಈ ಪಂದ್ಯಾವಳಿಗೆ ನಮ್ಮ ವಿದ್ಯಾರಣ್ಯಪುರದ ಸ್ಯಾಟಲೈಟು ಹಳ್ಳಿಗಳಾದ ತಿಂಡ್ಲು, ಬೊಮ್ಮಸಂದ್ರ, ಸಾಬರಪಾಳ್ಯ, ಬೆಟ್ಟದಪುರ, ಶಿವಕೋಟೆ, ಲಗ್ಗೆರೆ ಮೊದಲಾದ ಕಡೆಗಳಿಂದ ಹಲವಾರು ಟೀಮುಗಳು ಭಾಗವಹಿಸಿದ್ದವು. ಈ ಬಾರಿ ನಮ್ಮ ಈ ಪಂದ್ಯಾವಳಿಗೆ ಎಂತೆಂತಹ ಮಹಾನುಭಾವರು ಸ್ಪಾನ್ಸರುಗಳಾಗಿದ್ದಾರೆ ಎಂಬ ಹೆಗ್ಗಳಿಕೆಯಿಂದ ಒಂದು ಕರೀ ಹಲಗೆಯಲ್ಲಿ ಇವರುಗಳ ದೊಡ್ಡ ಪಟ್ಟಿಯನ್ನ ಸಣ್ಣದಾಗಿ ಬಣ್ಣದ ಸೀಮೆಸುಣ್ಣದಲ್ಲಿ ಗಟ್ಟಿಯಾಗಿ ಊರಿ ಬರೆದಿದ್ದೆವು. ಬೇಲ್ಸ್‌ಗಳನ್ನ ಸ್ಪಾನ್ಸರ್ಸ್ ಮಾಡಿದವರಿಂದ ಹಿಡಿದು ಸೂಜಿದಾರ ಒದಗಿಸಿದವರ ಹೆಸರುಗಳೂ

ನಮೂದಿತವಾಗಿತ್ತು. ಸೂಜಿದಾರಕ್ಕೂ ಕ್ರಿಕೆಟ್ ಮ್ಯಾಚಿಗೂ ಎಲ್ಲಿಂದ ಎಲ್ಲೀ ಸಂಬಂಧ ಅಂತ ನೀವು ಕೇಳುವಿರಿ ಅಂತ ಗೊತ್ತು. ಕ್ರಿಕೆಟ್ ಮ್ಯಾಚು ಆಡಿರುವವರಿಗೆಲ್ಲಾ ಈ ಸೂಜಿದಾರ ಯಾವ ಕಾರಣಕ್ಕೆ ಬೇಕು ಅಂತ ಗೊತ್ತಿರುತ್ತೆ. ಎಂಬತ್ತೆಂಟು ಕೇಜಿ ತೂಗುವ ಪ್ಲಸ್ ಫಾರ್ಟಿ ಟೀಮಿನ ವಿಕೆಟ್ ಕೀಪರ್‌ನ ತಗೊಳ್ಳಿ. ಆತ ಒಂದೊಂದು ಸಲ ಅತ್ತ ಇತ್ತ ಜರುಗಿ (ಈತ ಪಾರಲಾಗದಷ್ಟು ದಪ್ಪಗಿದ್ದಾನೆ ಅಂತ ಬೇರೆ ಹೇಳಬೇಕಿಲ್ಲ) ಬಾಲು ಹಿಡಿದಾಗ ಈತನ ಪ್ಯಾಂಟ್ ಹರಿಯುತ್ತೆ. ವರ್ಲ್ಡ್‌ಕಪ್ ಪಂದ್ಯ ನಡೆಯಬೇಕಾದರೆ ಹಿಂಭಾಗ ಹರಿದ ಪ್ಯಾಂಟು ಹಾಕಿಕೊಂಡು ಆಡಬಹುದೇ? ಕೂಡಲೇ ಪ್ಲೆಯರ್ರ್ಸು ಅವನ ಸುತ್ತ ಸೇರಿ ಅವನನ್ನ ಕಾರ್ಡನ್ ಮಾಡುತ್ತಾರೆ. ನಂತರ ಆತನ ಪ್ಯಾಂಟಿನ ರಿಪೇರಿ ಆಗುತ್ತೆ. ಆಟ ಮುಂದುವರೀತದೆ - ಹೀಗೆ ಕ್ರಿಕೆಟ್ ಆಟವನ್ನು ಹೊರಗೂ ಆಡುವುದು ನಮ್ಮ ಹುಡುಗರಿಗೆ ಅಭ್ಯಾಸವಾಗಿಹೋಗಿದೆ. ಅದರಿಂದ ಆಟದ ಮಧ್ಯದ ಈ ಹೋಲ್ಡ್‌ಅಪ್ಸ್ ಬಗೆಗೆ ಯಾರದ್ದೂ ಕಿರಿಕಿರಿ ಪಿರಿಪಿರಿ ಇಲ್ಲ.

ಮೊದಲನೇ ಪಂದ್ಯ ಆರಂಭ ಆಯಿತು. ತಿಂಡ್ಲು ಇಲೆವೆನ್ ಸಂಗಡ ಸಾಬರ ಪಾಳ್ಯದ ಇಂಡಿಯಾ ಇಂಟರ್‌ನ್ಯಾಷನಲ್ ಸ್ಟಾರ್ ಸ್ಪೋರ್ಟ್ಸ್‌ನವರು ಆಡುತ್ತಿದ್ದರು. ಟಾಸ್‌ಗೆದ್ದ ತಿಂಡ್ಲುವಿನ ಬೋರಣ್ಣ ಬ್ಯಾಟಿಂಗ್ ತಗೊಂಡಿದ್ದ. ಸ್ಟಾರ್‌ನ ಅಲ್ತಾಫ್ ಬೋಲಿಂಗು ಆರಂಭಿಸಿದ. ಮೊದಲನೇ ಓವರಿನಲ್ಲಿ ಆರು ರನ್ನು - ವೈಡು ಮೂಲಕ ಬಂದವು. ಈ ತುದೀಲಿನ ಬ್ಯಾಟ್ಸ್‌ಮನ್ ಎರಡನೇ ಓವರಿಗೆ ತುದಿ ಬದಲಿಸಿದ. ಈ ಓವರಿನಲ್ಲಿ ಮತ್ತೆ ಆರು ರನ್ನು ಸೇರಿತು - ನಾಲ್ಕು ನೋಬಾಲು ಎರಡು ವೈಡ್‌ಗಳ ಮೂಲಕ. ಸ್ಟಾರ್‌ನವರು ಆಗಲೇ ಗೊಣಗಾಟ ಶುರು ಮಾಡಿದ್ದರು - ಅಂಪೈರು ಮೋಸಮಾಡ್ತಿದಾನೆ ಅಂತ. ಮೂರನೇ ಓವರು ಶುರು ಆಯಿತು. ಅಲ್ತಾಫ್‌ನ ಮೊದಲೆರಡು ಬಾಲು ವೈಡ್ ಅಂತ ಡಿಕ್ಲೇರ್ ಆಯಿತು. ಮೂರನೇ ಬಾಲು ಬ್ಯಾಟ್ಸ್‌ಮನ್ ಕಾಲಿಗೆ ತಗುಲಿತು. ಇಡೀ ಸ್ಟಾರ್‌ಟೀಮು ಹೌಸ್ದಾಟ್ ಅಂತ ಅಂಪೈರ್‌ನ ಸುತ್ತುವರೆದರು. ಆ ಪಂದ್ಯಕ್ಕೆ ಅಂಪೈರ್ ಆಗಿದ್ದವರು ನಮ್ಮ ಅಬೋವ್ ಸಿಕ್ಸ್ಟಿಯ ಶೇಷಪ್ಪ. ಶೇಷಪ್ಪ ನಥಿಂಗ್ ಡೂಯಿಂಗ್ ಅಂತ ನಿಂತುಬಿಟ್ಟರು. ಸ್ಟಾರ್‌ನವರ ಕೋಪ ನೆತ್ತಿಗೇರಿತು. 'ಅಂಪೈರು ಪಾರ್ಸಾಲಿಟಿ ಮಾಡ್ತಾ ಅವನೆ' ಅಂತ ಮೈದಾನದಲ್ಲಿ ಕೂತುಬಿಟ್ಟರು. ಈ ತರಹದ ಜಗಳದ ಅಭ್ಯಾಸ ಇದ್ದ ನಾವು ಇಂತಹ ಸಮಯಕ್ಕೇ ಅಂತಲೇನೇ ಒಬ್ಬರು ಥರ್ಡ್ ಅಂಪೈರ್‌ನ ಗೊತ್ತು ಮಾಡಿದ್ದೋ. ಈ ಥರ್ಡ್ ಅಂಪೈರ್ ಅಬೋವ್ ಸೆವೆಂಟಿಯ ಗುರುರಾಜ ರಾಯರು. ಅಂದಹಾಗೆ ಗುರುರಾಜರಾಯರು ಕುಡಿಯೋ ನೀರಿನ ಲೋಟ ಸ್ಪಾನ್ಸರ್ ಮಾಡಿದ್ದವರು. ಶೇಷಪ್ಪ - ಈ ಪಂದ್ಯದ ಅಂಪೈರು ಸ್ಕೋರರುಗಳಿಗೆ ಎರಡು ಪೆನ್‌ಸ್ಪಾನ್ಸರ್ ಮಾಡಿದ್ದ. ಥರ್ಡ್ ಅಂಪೈರ್‌ನ ಬಾಜಿನ್ಯಾಯಕ್ಕೆ ಅಂತ ಮೈದಾನದ ಒಳಗೆ

ಕಳಿಸಿದೆವು. ಅಂಪೈರು ನಿಧಾನಕ್ಕೆ ಮೈದಾನದ ಮಧ್ಯಭಾಗ ಸೇರಿದರು. ಬೋಲರ್ ತುದಿಯ ವಿಕೆಟ್ ಹತ್ತಿರ ನಿಂತರು. ಎರಡು ನಿಮಿಷ ಕಣ್ಣು ಮುಚ್ಚಿದರು. ನಿಧಾನಕ್ಕೆ ಕೈ ಎತ್ತಿ ಔಟ್ ಅಂತ ತೋರಿಸಿದರು. ಸ್ಟಾರ್‌ಸ್ಟೋರ್ಸ್‌ನವರು ಅವರವರನ್ನೇ ತಟ್ಟಿಕೊಂಡು ಖುಷಿ ಪಡಬೇಕಾದರೆ ಎಲ್.ಬಿ. ಆಗಿದ್ದ ಬ್ಯಾಟ್ಸ್‌ಮನ್ನು ನಾನು ಔಟಲ್ಲ, ಆಚೆ ಹೋಗಾಕಿಲ್ಲ ಅಂತ ಧರಣಿ ಹೂಡಿದ. ನಾವೆಲ್ಲಾ ಮೈದಾನಕ್ಕೆ ನುಗ್ಗಬೇಕಾಯಿತು. ಔಟಲ್ಲ ಎಂಬುದು ಶೇಷಪ್ಪನ ಕಡೆ ಒಂದು ಗುಂಪು ರೆಡಿ ಆಗ್ತಿದ್ದ ಹಾಗೇ ಇಡೀ ಸಾಬರ ಪಾಳ್ಯದವರು ಗುರುರಾಜರಾಯರ ಹಿಂದೆ ನಿಂತು ಅವರದೊಂದು ಗುಂಪು ರೆಡಿ ಆಯಿತು. ಇಬ್ಬರಿಗೂ ಮಾರಾ ಮಾರಿ ಆಗುವ ಸಂಭವ ಕಂಡಿದ್ದರಿಂದ ಮ್ಯಾಚ್‌ನ ಅಬಾಂಡನ್ ಮಾಡಿದೆವು. ಶೇಷಪ್ಪ ಗುರುರಾಜರಾಯರು ಒಬ್ಬರನ್ನ ಒಬ್ಬರು ದುರು ದುರು ನೋಡ್ತಾ ಅದೇನೇನೋ ಬೈದಾಡ್ತಾ ಗ್ರೌಂಡಿಂದ ಆಚೆ ಬಂದರು. ಬರೀ ಲೋಟ ಕೊಟ್ಟು ನಿನ್ನ ಹೆಸರು ಮೇಲೆ ಬರಸ್ಕೊಂಡಿದಿಯಾ ನಾಚಿಕೆ ಆಗುಲ್ಲವೇನಯ್ಯಾ? ಅಂತ ಶೇಷಪ್ಪ ಗುರುರಾಜ ರಾಯರಿಗೆ ಬೈತಿದ್ದದು ಕೇಳಿಸಿತು. ಎರಡು ಅಡಕಾಸಿ ಪೆನ್ನು ಕೊಟ್ಟು ಹೆಸರು ಬರೆಸಿಕೊಂಡೆಯಲ್ಲಾ ಅದಕ್ಕಿಂತ ನಾನೇ ವಾಸಿ ಅಂತ ಗುರುರಾಜರಾಯರು ಹಿಂತಿರುಗಿಸ್ತಾ ಇದ್ದರು. ಇಬ್ಬರನ್ನೂ ಅವರ ಪಾಡಿಗೆ ಅವರ ಜಗಳಕ್ಕೆ ಬಿಟ್ಟು ಮುಂದಿನ ಪಂದ್ಯ ಆರಂಭಿಸಿದೆವು. ಅವರು ಸ್ಪಾನ್ಸರ್ಸ್ ಬೋರ್ಡ್ ಬಗ್ಗೆ ಮಾತು ಆಡುತ್ತಿದ್ದರು.

ನಮ್ಮ ಗಮನ ಇತ್ತ ಇರಬೇಕಾದರೆ 'ಜಿಂದಾಬಾದ್' ಅಂಬೋ ಕೂಗು ಕೇಳಿ ಅತ್ತ ತಿರುಗಿದರೆ ಸಾಬರ ಪಾಳ್ಯದವರು ಗುರುರಾಜರಾಯರನ್ನು ಮುಂದಿಟ್ಟುಕೊಂಡು ಮೆರವಣಿಗೆ ಶುರು ಮಾಡಿದ್ದಾರೆ. ಮತ್ತೊಂದು ಕಡೆ ಬೋರಣ್ಣನ ಗ್ಯಾಂಗು ಶೇಷಪ್ಪನ್ನ ನಿಲ್ಲಿಸಿಕೊಂಡು ಸ್ಟಾರ್ ಸ್ಟೋರ್ಸ್‌ಗೆ 'ಮುರ್ದಾಬಾದ್' ಹಾಕುತ್ತಿದೆ.


ಎರಡೂ ಟೀಮೂ ದೂರ ದೂರ ಸರಿದವು. ಆಗಾಗ್ಗೆ ಜಿಂದಾಬಾದ್ ಮುರ್ದಾಬಾದ್‌ಗಳೂ ಕೇಳಿಸುತ್ತಿತ್ತು. ಅರ್ಧಘಂಟೆ ಅರಚಿಕೊಳ್ತಾರೆ ಬಾಯಿ ಬಡ್ಕೋತಾರೆ. ನಂತರ ತೆಪ್ಪಗಾಗ್ತಾರೆ, ಬಾಲ ಮುದುರಿಕೊಂಡು ಮ್ಯಾಚು ಆಡ್ತೀವಿ ಅಂತ ಮತ್ತೆ ಬರ್ತಾರೆ ಅಂತ ನಾವೂ 'ಡೋಂಟ್ ಕೇರ್ ಮಾಸ್ಟರ್ಸ್' ಆದೆವು.

ಅರ್ಧಘಂಟೆ ಆದರೂ ಎರಡೂ ಟೀಮಿನವರು ಪತ್ತೆ ಇಲ್ಲ. ಇನ್ನೂ ಬಾಯಿ ನೋಯಕ್ಕೆ ಶುರು ಆಗಿಲ್ಲ ಅಂಥ ಅಂದುಕೊಂಡೆವು. ಒಂದು ಗಂಟೆ ಆಯಿತು, ಇಬ್ಬರೂ ಪತ್ತೆ ಇಲ್ಲ. ಲಂಚ್ ಸಮಯ ಬಂತು, ಅವರು ಪತ್ತೇನೇ ಇಲ್ಲ. ಟೀ ಬ್ರೇಕ್‌ನ ಹೊತ್ತಿಗೆ ಸಹ ಅವರು ಬರದೇ ಇರೋದು ನೋಡಿ ಅವರನ್ನ ಇವರು ಇವರನ್ನ ಅವರು ಖೂನಿಗೀನಿ ಮಾಡಿಬಿಟ್ಟುಕೊಂಡಿದಾರೋ ಅನ್ನಿಸ್ತು. ಆಮೇಲೆ ನಾವೆಲ್ಲರೂ ಕಂಬಿ ಎಣಿಸಬೇಕಾಗುತ್ತೆ ಅಂತ ನಮಗೆ - ಮ್ಯಾಚು

ಅರೇಂಜಿಸಿದವರಿಗೆ ದಿಗಿಲು ಶುರು ಆಯಿತು. 'ಏನಾಗ್ಯೆತೆ ನೋಡ್ಕೊಂಬಾರ್ಲಾ ಪೋಲೀಸು ಗೀಲೀಸು ಕಂಡರೆ ಹತ್ತಿರ ಸುಳೀಬೇಡ' ಅಂತ ನಮ್ಮ ಅಂಡರ್ ಫೋರ್ಟೀನ್‌ನ ಸಮೀರನಿಗೆ ಸೈಕಲ್ಲುಕೊಟ್ಟು ಕಳಿಸಿದೆವು. ಚುಲ್ಟಾರಿ ಹತ್ತು ನಿಮಿಷದಲ್ಲಿ ವಾಪಸ್ಸು ಬಂತು "ಸಾಬರ ಪಾಳ್ಯದವರು ಗುರುರಾಜ ಅಜ್ಜನ ಎಳಕೊಂಡುಬಿಟ್ಟವ್ರೆ. ಅವರ ಟೀಂಗೆ ಇನ್ನುಮುಂದೆ ಅವರೇ ಚೀಫ್ ಪ್ಯಾಟ್ರನ್ ಅಂತೆ. ಈ ಗ್ರೌಂಡಿಗೆ ತಲೆ ಹಾಕೋದಿಲ್ಲಂತೆ" ಅಂತ ಹೇಳಿದ. ಹಾಗಿದ್ರೆ ನೀರಿನ ಲೋಟಗಳಿಗೆ ಬೇರೆ ಸ್ಪಾನ್ಸರ್‌ನ ಹಿಡೀಬೇಕಾಗುತ್ತೆ ಅಂತ ನಾವು ತಲೆ ಮೇಲೆ ಕೈಹೊತ್ತಿಕೂತರೆ ತಿಂಡ್ಲುದಿಂದ ಹಾಲು ತಂದು ಹಾಕುವ ಸೈಕಲ್ ಮಂಜ ಬಂದ. ತಿಂಡ್ಲುನೋರು ಶೇಷಜ್ಜನ ಚೀಫ್ ಪ್ಯಾಟ್ರನ್ ಅಂತ ಮಾಡ್ಕೊಂಡೋರೆ. ಅವರಿಗೆ ನೀವೆಲ್ಲಾ ಸಪೋರ್ಟ್ ಮಾಡಲಿಲ್ಲ ಅಂತ ಕೋಪಾನಂತೆ. ಇನ್ಮೇಲೆ ನಂಗೂ ಆ ಹಾಳು ವಿದ್ಯಾರಣ್ಯಪುರದ ಟೀಂಗೂ ಸಂಬಂಧ ಇಲ್ಲ ಅಂತ ಹೇಳ್ತಾ ಅವ್ರೆ ಅಂದ.

ಇಬ್ಬರು ಗಟ್ಟಿ ಸ್ಪಾನ್ಸರ್ರುಗಳು ಹೀಗೆ ಏಕ್‌ದಂ ನಮ್ಮಿಂದ ಹೈಜಾಕ್ ಆಗಿಬಿಟ್ಟರೇ ಆಂತ ತಲೆಮೇಲೆ ಕೈ ಹೊತ್ತೆವು. "ಚಿಂತಿಸಬೇಡ್ರೋ ಹೋದರೆ ಹೋಕ್ಕಳ್ಳಿ ಅವ್ರು. ಪೆನ್ನು ಲೋಟ ತಾನೇನೋ ಕಡಿಮೆ ಆಗಿದ್ದು? ಬೇರೆ ಯಾರಾದರೂ ಬಕರಾನ ಹಿಡಿದರೆ ಆಯಿತು ಬಿಡ್ರೋ." ಅಂತ ನಮ್ಮ ಲೀಟರು ದೋಸೆಕಿಟ್ಟಿ ನಮ್ಮ ಬೆನ್ನು ಸವರಿದ. ದೋಸೆ ಕಿಟ್ಟಿಗೆ ದೋಸೆಕಿಟ್ಟಿ ಅಂತ ಯಾಕೆ ಹೆಸರು ಬಂತು ಅಂದರೆ ಅವನಿಗೆ ಮಸಾಲೆ ಅಂದರೆ ಪ್ರೀತಿ ಅಂತ ಅಲ್ಲ; ಆತ ಫೀಲ್ಡಿಂಗ್ ಮಾಡಬೇಕಾದರೆ, ಬಾಲನ್ನ ಹಿಡೀಬೇಕಾದರೆ ದೋಸೆ ಹೊಯ್ಯುವ ರೀತಿ ಗುಂಡಗೆ ಓಡಿ ಬರ್ತಾನೆ ಅಂತ.

ನಮ್ಮ ವಿದ್ಯಾರಣ್ಯಪುರದಲ್ಲಿ ನಡೆದ ಇಂತಹ ಹೈಜಾಕ್ ಪ್ರಸಂಗ ಯಾರ ಗಮನಕ್ಕೂ ಬರದೇ ಹೋಗಿದ್ದು ನಮಗೆ ಅತೀವ ನೋವು, ದುಃಖ, ಖೇದ, ಸಂತಾಪ ಇನ್ನೂ ಏನೇನೋ ತಂದಿದೆ.....



ಹೆಸರಲ್ಲೇನಿದೆ?

- ಅನಾಜಿ

ಮನುಷ್ಯ ಹುಟ್ಟಿದ ಮೇಲೆ ಸಾಧನೆ ಮಾಡಬೇಕು. ಕೀರ್ತಿಗೆ ಆಸೆ ಪಡಬಾರದು ಹೆಸರಲ್ಲೇನಿದೆ! ಎಂತೆಂಥವರೋ ಮಣ್ಣಾದರು ಇತ್ಯಾದಿ ವೇದಾಂತಿಗಳ ಭಾಷಣ ಮಾಡಲು ನಾನು ಹೊರಟಿಲ್ಲ ಗಾಬರಿ ಆಗಬೇಡಿ.

ಹೆಸರಲ್ಲೇನಿಲ್ಲ ನನಗೂ ಗೊತ್ತು. ಆದರೆ ದೊಡ್ಡವರು ಇಟ್ಟ ಹೆಸರಿನಿಂದ ಚಿಕ್ಕವರು ದೊಡ್ಡವರಾದಾಗ ಆಗುವ ಫಜೀತಿ ಅನೇಕರಿಗೆ ತಿಳಿಯದು. ಪಾಪ ಹಿರಿಯರಿಗೆ ಸದುದ್ದೇಶವೇ ಇರುತ್ತೆ. ಆದರೆ ರಾಯರ ಕುದುರೆ ಬರ್‍ತಾ ಬರ್‍ತಾ... ಆಯಿತು ಎಂಬಂತೆ ಹೆಸರು ಬರುಬರುತ್ತಾ ನಾನಾ ಅವತಾರ ತಾಳಿಬಿಡುತ್ತೆ. ಹೆಸರಿನ ತಂಟೆಗೆ ಹೋದರೆ ಏನಾಗುತ್ತೋ ಹೇಳಲಿಕ್ಕಾಗದು. ನನ್ನ ಗೆಳೆಯ ರವಿ ಎಂಬಾತನ ಆದ್ಯಕ್ಷರ (ಇನ್ಶಿಯಲ್) ಕೆ. ಅವನನ್ನು ಶಾಲೆಯಲ್ಲಿ ಮಾಸ್ತರರು ಹೆಸರನ್ನು ಕೂಗುವಾಗಲೆಲ್ಲ 'ರವಿಕೆ' ರವಿಕೆ ಎಂದೇ ಕರೆಯುತ್ತಿದ್ದ. ಸಾರ್ ರವಿ. ಕೆ ರವಿಕೆ ಅಲ್ಲ ಎಂದು ಹೇಳಿದರೂ ತಿಳೀತಯ್ಯಾ ರವಿಕೆ ಅಂತಾನೇ ನಿನ್ನ ಹೆಸರು ಅಲ್ಲವೇ? ಅನ್ನುತ್ತಿದ್ದರು ಅಧ್ಯಾಪಕರು.

ಇನ್ನೊಬ್ಬ ಮಿತ್ರರು ನನ್ನ ಆತ್ಮೀಯ ಅವನ ಹೆಸರು ಮ.ತಿ. ವಿಜಯ ಅವನು ಕನ್ನಡಪ್ರೇಮಿ ತನ್ನ ಆಧ್ಯಕ್ಷರವಾದ ಎಂ.ಟಿ.ಯನ್ನು ಮ.ತಿ. ಎಂದು ಮಾಡಿಕೊಂಡಿದ್ದನು (ಮಂಗನೂರು ತಿಮ್ಮಣ್ಣಾಚಾರ್ ಮಗ) ಅವನಿಗೆ ಆಹ್ವಾನ ಪತ್ರ ಕಳಿಸುವವರೆಲ್ಲ ಗೌರವಕ್ಕಾಗಿ ಶ್ರೀ ಸೇರಿಸಿ ಶ್ರೀಮತಿ ವಿಜಯ ಎಂದು ಬರೆಯುತ್ತಿದ್ದರು ಅನಾಯಾಸನಾಗಿ ಲಿಂಗಪರಿವರ್ತನೆ ಆಗಿಬಿಡುತ್ತಿತ್ತು. ಅಂಚೆ ಪತ್ರದಲ್ಲಿ.

ಮುಂದಾಗೋದು ಯಾರಿಗೆ ತಿಳಿದಿರುತ್ತೆ ಹೇಳಿ. ತ್ರಿಕಾಲಜ್ಞಾನಿಗಳು ಈಗೆಲ್ಲಿ ಈಗೆಲ್ಲಾ ಕಾಲಂಜ್ಞಾನಿಗಳೇ. ಮಗು ತೆಳ್ಳಗೆ ಬೆಳ್ಳಗೆ ಇದೆ ಅಂತ ಕೋಮಲಾಂಗಿ ಅಂತ ಹೆಸರಿಟ್ಟಾಗ, ಚೆನ್ನಾಗಿ ತಿಂದು ಕೊಬ್ಬಿ ಬೆಳೆದು 'ಗೂಳಿನಿ' ಆಗಿ 'ಢಂಢಂ ಡೋಲು' ಆದಾಗ ಹೆಸರನ್ನು ಬದಲಾಯಿಸಿಕೊಳ್ಳಲಾದೀತೇ? ಸಹಜವಾಗಿರಬೇಕು ಅಂತ ಹಂಡೆಯಾಂಗಿ ಎನ್ನಲಾದೀತೇ? ಇಪ್ಪತ್ತು ವರುಷದ ಮೇಲೆ ತಮ್ಮ ಸುಕುಮಾರಿ ಹೀಗೆ ಕು-ಮಾರಿ ಆಗುತ್ತಾಳೆ ಅಂತ ಆ ತಾಯಿ ತಂದೆಯರಿಗೆ ಹೇಗೆ ತಿಳಿದೀತು.

ಮೊದಲೇ ಅರ್ಥಪೂರ್ಣವಾಗಿ ಹೆಸರಿಡಬೇಕು ಅಂತ ನಮ್ಮ ಸ್ನೇಹಿತರೊಬ್ಬರು ಎಲ್ಲ ದೇವರಿಗೂ ಕುಂಕುಮಾರ್ಚನೆ, ಪುಷ್ಪಾರ್ಚನೆ, ಲಕ್ಷಾರ್ಚನೆ ಇನ್ನೂ ಏನೇನೋ ಅರ್ಚನೆಗಳನ್ನೆಲ್ಲಾ ಅರ್ಚಕರಿಂದ ಮಾಡಿಸಿದ ಫಲವೋ ಏನೋ ಸಂತಾನಪ್ರಾಪ್ತಿ ಆದಾಗ ಅದೆಲ್ಲದರ ನೆನಪಾಗಿ (ಅರ್ಚನಾ- ಎಂದು ಹೆಸರಿಟ್ಟರು. ಆದರೆ ಆ ಮಗು ಒಂದೇ ಸಮ ಸದಾ ಅರಚುತ್ತಾ ಇದ್ದುದರಿಂದ ಕಂಡವರೆಲ್ಲಾ ಸರಿಯಾದ ಹೆಸರಿಟ್ಟಿದ್ದಾರೆ ಅರ್‌ಚನಾ ಎಂದಾಗ ತಪ್ಪೇನು? ಮುಂದಿನ ಮಗು ಹೆಸರೇನು? ಎಂದು ಯಾರೋ ಅವರನ್ನು ಕೇಳಿದರಂತೆ ಆ ಕಾಲದ ಘೋಷಣೆ ನಾವಿಬ್ಬರು ನಮಗಿಬ್ಬರು, ಆರತಿಗೊಬ್ಬಳು ಕೀರುತಿಗೊಬ್ಬಳು ಎಂಬ ಕಾಲವಾಗಿತ್ತು. ಈಗ ಬಿಡಿ ನಾವಿಬ್ಬರು ನಾವೇ ಒಬ್ಬರಿಗೊಬ್ಬರು ನಮಗಿಲ್ಲ ಒಬ್ಬರು, ಇದ್ದರೂ ಅವರಿಗೆ ಇದ್ದಾರೆ ಇನ್ನೊಬ್ಬರು ಎಂಬ ಕಾಲ.

ಈ ಮಗು ಅರಚಿದ್ದಕ್ಕೆ ಅರ್ಚನಾ ಎಂದಿಟ್ಟಿದ್ದಾರೆ ಆ ಮಗು ಕಿರುಚುತ್ತೆ ಅದಕ್ಕೆ ಕಿರ್ಚನಾ ಎಂದು ಹೆಸರಿಡುತ್ತಾರೆ ಅಂತ ಕಾಣುತ್ತೆ ಅಂತ ಮಿಟುಕಲಾಡಿ ಮೀನಾಕ್ಷಮ್ಮ ಅಂದಾಗ ಹೌದೌದು ಮೂರನೇ ಮಗುವಿಗೆ 'ಪರ್‌ಚನಾ' ಎಂದು ಹೆಸರಿಡುತ್ತಾರೆ ಏಕೆಂದರೆ ಅದು ಪರಚೋದು ಹೆಚ್ಚು ಅಂತ ಕಿರುಪೇಟೆ ಕಿಲಾಡಮ್ಮ ಅಂಬೋಣ ಕೇಳಿದ ಮೇಲೆ ನಾಲ್ಕನೆಯ ಮಗು ಹೆಸರು ನಿಮ್ಮ ಊಹೆಗೇ ಬಿಟ್ಟಿದೆ!

ಹೆಸರಲ್ಲೇನಿದೆ? ಅಂತ ಕೇಳೋದು ಸುಲಭ ಹೆಸರಿಗೆ ತಕ್ಕಂತೆ ನಡೆಯೋದು ಕಷ್ಟ. ಸುಳ್ಳು ಹೇಳುವ ಹರಿಶ್ಚಂದ್ರಯ್ಯನವರನ್ನು, ಅವರು ಬಂದರು ಒಳಗಿಡು ಅವರು ಹೋದಮೇಲೆ ಕೊಡು ಅನ್ನೋ ಕರ್ಣಪ್ಪನವರನ್ನು, ಬಂದವರಿಗೆ ಒಂದು ಲೋಟ ನೀರು ಕೊಡದ ಅನ್ನಪೂರ್ಣಮ್ಮನವರನ್ನು, ಸದಾ ಆಸ್ಪತ್ರೆಗೆ ಹೋಗುವ ಆರೋಗ್ಯಮ್ಮನ್ನ ಕಂಡಾಗ ಹೆಸರಲ್ಲೇನಿದೆ ಎನ್ನಲಾದೀತೇ?

ನೆನಪಾಯಿತು ನೋಡಿ ನನ್ನ ಸ್ನೇಹಿತ ರಾಮೂನ ಸೊಂಟಕವಚ (ಲಂಗೋಟಿ ದೇಸೀ ಪದ) ಮಿತ್ರ ಕೋದಂಡನ ಹೆಸರಿನ ಮಹಾತ್ಮೆ. ಎಲ್ಲದಕ್ಕೂ ಫೈನ್ ತೆತ್ತು ತೆತ್ತು ಅವನು ನಿಜಕ್ಕೂ ಕೋ-ದಂಡ ಕೋ-ದಂಡ ಆಗಿಬಿಟ್ಟಿದ್ದ. ಇದಲ್ಲವೇ ನಾಮ ಸಾರ್ಥಕತೆ!

ಹೆಸರಿನಿಂದ ಒಂದು ಕಾಲಕ್ಕೆ ಜಾತಿ ಕುಲ ಎಲ್ಲಾ ತಿಳಿಯುತ್ತಿತ್ತು. ಅಯ್ಯಂಗಾರ್, ಆಚಾರ್ ಶಾಸ್ತ್ರಿ ಅಯ್ಯರ್ ಇತ್ಯಾದಿ ಪದಗಳು ಅನಿವಾರ್ಯವಾಗಿ ಸೇರುತ್ತಿತ್ತು. ಒಬ್ಬರನ್ನು ಚುಡಾಯಿಸುವಾಗಲೂ ಆ ಪದಗಳು ಹೆಸರಿನಿಂದ ಬಿಟ್ಟು

ಹೋಗುತ್ತಿರಲಿಲ್ಲ 'ರೆಕ್ಕೆಯಿಲ್ಲ ಪುಕ್ಕವಿಲ್ಲ ಗರುಡಯ್ಯಂಗಾರ್' ಅಂತ ಹುಡುಗರು 'ದುಡ್ಡಿಲ್ಲ ಕಾಸಿಲ್ಲ ಸಂಪತ್ತೈಯ್ಯಂಗಾರ್' ಎಂದು ತಂತಮ್ಮಲ್ಲೇ ಚುಡಾಯಿಸುತ್ತಿದ್ದರು. ಅವರವರಲ್ಲೇ ಇದ್ದ ಮಾತು ಬೇರೆಯವರು ಏನು ಹೇಳಲು ಸಾಧ್ಯ.

ಆದರೆ ಈ ಕಾಲದಲ್ಲಿ ಅವೆಲ್ಲಾ ನಡೆಯದ ನಾಣ್ಯ. ಪತ್ರಿಕೆಗಳಲ್ಲಿ ಹೆಸರು ಬದಲಾಯಿಸಿಕೊಂಡ ಜಾಹೀರಾತುಗಳು ಬೇಕಾದಷ್ಟು ಬರುತ್ತವೆ. ಜಾಲಿ ಕಪ್ಪಣ್ಣನಾದ ನಾನು ಮಧುರಮೋಹನ ಎಂದು ಬದಲಿಸಿಕೊಂಡಿದ್ದೆ. ಕೊರಟಿಹಳ್ಳಿ ಕರಿಯಮ್ಮ ಜಗನ್ಮೋಹಿನಿ ಎಂದು ಬದಲಿಸಿಕೊಂಡಿದ್ದನ್ನು ಓದುತ್ತೇನೆ. ಹೆಸರು ಚೆನ್ನಾದರೆ ಬಸುರು ಚೆನ್ನಾದೀತೆ? ಆದರೆ ಸಂತೋಷ!

ಹೆಸರುಗಳಿಗೆ ಯಾವ ಯಾವ ರೀತಿ ತಾಪತ್ರಯ ಇರುತ್ತೋ ಹೇಳಲಿಕ್ಕಾಗದು. ರಮಾ ಎಂದು ಹೆಸರಿಟ್ಟುಕೊಂಡರೆ ಇಂಗ್ಲೀಷಿನಲ್ಲಿ ಓದಿದಾಗ ಲಿಂಗ ಪರಿವರ್ತನೆ ಆಗಿ 'ರಾಮ' ಆಗಿಬಿಡಬಹುದು ಉಚ್ಚಾರಣೆ ಮಹಿಮೆಯಿಂದ, ವಿಜಯ ನಾಮ ಸ್ತ್ರೀಲಿಂಗ ಅಥವಾ ಪುಲ್ಲಿಂಗ ಅಂತ ವ್ಯಕ್ತಿಯನ್ನು ನೋಡದೆ ಹೇಳಲು ಸಾಧ್ಯವೇ. ಇನ್ನು ಉಳ್ಳಾಗಡ್ಡಿ ಮೆಣಸಿನಕಾಯಿಗಳನ್ನು ನಮ್ಮನಾಡಿನ ಇನ್ನೊಂದು ಭಾಗದ ಜನಕ್ಕೆ ಏನಂತ ಪರಿಚಯ ಮಾಡಿಸುವುದು ನೀವೇ ಹೇಳಿ!

ಅಂದಹಾಗೆ ನಿಮ್ಮ ಹೆಸರಿನ ಗತಿ ಏನಾಗಿದೆ ಯೋಚಿಸಿದಿರಾ?



ನನ್ನ ಮೊದಲ ಹಾಸ್ಯೋತ್ಸವ

– ಕುಮುದಾ ಪುರುಷೋತ್ತಮ್

ಕಳೆದ ಶತಮಾನದ ತೊಂಬತ್ತಾರರ ಡಿಸೆಂಬರ್ ತಿಂಗಳ ಮೊದಲನೆಯ ವಾರ. ಇಪ್ಪತ್ತೈದು ವರ್ಷಗಳ ಚೆನ್ನೈ ವಾಸ ಮುಗಿಸಿ ಹುಟ್ಟೂರಿಗೆ ಹಿಂದಿರುಗುವ ಹವಣಿಕೆಯಲ್ಲಿದ್ದೆ. ಅಷ್ಟು ದೀರ್ಘ ಕಾಲದಿಂದ ಶೇಖರವಾಗಿದ್ದ ಸಾಮಾನಿನ ರಾಶಿ ನೋಡಿ ಮನೆ ಮಠಗಳ ಮೇಲೆ ವೈರಾಗ್ಯ ಬಂದುಬಿಟ್ಟಿತ್ತು. ಅದರಲ್ಲಿ ಉಪಯೋಗಕ್ಕಿಂತ ಬಾರದ ವಸ್ತುಗಳೇ ಜಾಸ್ತಿ ಇದ್ದಂತಿತ್ತು. ಸ್ವಲ್ಪವನ್ನು ಮಾರಿ ಹೆಚ್ಚಿನದನ್ನು ದಾನವಾಗಿತ್ತಿದ್ದೆ. ಅದರಲ್ಲಿ ಮುಖ್ಯವಾದವು ಅರೆಯುವ ಮತ್ತು ಬೀಸುವ ಕಲ್ಲುಗಳು. ದಾನವಾಗಿತ್ತರೂ ಯಾರಿಗೂ ಅವು ಬೇಡವಾಗಿತ್ತು. ಕೊನೆಗೆ ಒಬ್ಬ ಬಡಪಾಯಿಯನ್ನು ಹಿಡಿದು ಅದನ್ನೊಯ್ಯಲು ಆಟೋ ಚಾರ್ಜು, ಮೇಲೆ ಬಕ್ಷೀಸು ಕೊಟ್ಟು ಸಾಗಹಾಕಿದ್ದಾಯಿತು. ಇಷ್ಟೆಲ್ಲಾ ವಿಲೇವಾರಿ ಮಾಡಿದರೂ ಇನ್ನೂ ಒಂದು ಲಾರಿ ಲೋಡಿನಷ್ಟು ಸಾಮಾನು ಮನೆತುಂಬಾ ಕೂತಿತ್ತು. ನನ್ನ ಕಷ್ಟ ನೋಡಿದ ನಮ್ಮ ಮಿತ್ರವೃಂದದವರು ಎರಡೂ ಹೊತ್ತು ಒಬ್ಬೊಬ್ಬರ ಮನೆಯಲ್ಲಿ ಔತಣದ ವ್ಯವಸ್ಥೆ ಮಾಡಿ ಅಜೀರ್ಣಕ್ಕೆ ಕಾರಣವಾದರು. ನಾನು ಅಡುಗೆ ಮನೆಗೆ ಬೀಗಮುದ್ರೆ ಹಾಕಿ ಸಾಮಾನು ಕಟ್ಟುವ ಕಾರ್ಯನಿರತಳಾದೆ.

ಇಂತಹ ಒಂದು ದಿನ ಅಂಚೆಯಲ್ಲಿ ಅಪರಂಜಿ ಪತ್ರಿಕೆ ನನ್ನ ಕೈ ತಲಪಿತು. ಅದನ್ನು ಕುಳಿತು ಓದಲು ವ್ಯವಧಾನವಿಲ್ಲದೆ ಕೇವಲ ಪಕ್ಷಿ ನೋಟ ಹರಿಸಿ ಬೆಂಗಳೂರಿಗೆ ಪ್ರಯಾಣಿಸುವಾಗ ಮಾರ್ಗದಲ್ಲಿ ಓದುವ ಎಂದುಕೊಂಡು ಕೈಗೆ ಸಿಗುವಂತೆ ಕೈ ಚೀಲದಲ್ಲಿ ತುರುಕಿದೆ. ಆ ಪಕ್ಷಿ ನೋಟದಲ್ಲೂ ನನ್ನ ಗಮನ ಸೆಳೆದದ್ದು ಅಪರಂಜಿ ವೇದಿಕೆ ನಡೆಸಲು ಆಯೋಜಿಸಿದ್ದ ಹಾಸ್ಯೋತ್ಸವಕ್ಕೆ ಆಹ್ವಾನ. ಸ್ಥಳ: ಡಾ|| ಎಚ್.ಎನ್. ಕಲಾಕ್ಷೇತ್ರ ಎಂಬುದು ಕಣ್ಣಿಗೆ ಬಿದ್ದಿತ್ತಾದರೂ ದಿನಾಂಕ ಡಿಸೆಂಬರ್ ನಾಲ್ಕನೇ ವಾರದಲ್ಲಿ ಎಂಬುದಷ್ಟು ಅರಿವಾಗಿತ್ತು. ಬೆಂಗಳೂರು ತಲಪಿದ ಮೇಲೆ ವಿವರಗಳೆಲ್ಲಾ ಸರಿಯಾಗಿ ನೋಡಿದರಾಯ್ತು ಈಗಲೇ ಅದರ ಕಾಳಜಿ ಬೇಡ ಎಂದುಕೊಂಡು ಕಾರ್ಯೋನ್ಮುಖಳಾದೆ.

ಊರು ಬಿಡುವ ಒಂದೆರಡು ದಿನದ ಮುಂಚಿನಿಂದ ವಿದಾಯ ಹೇಳಲು ಇಷ್ಟ ಮಿತ್ರರ ಆಗಮನ ಬೆಳಗಿನಿಂದ ರಾತ್ರಿಯವರೆಗೂ ನಡೆದಿತ್ತು. ಇಪ್ಪತ್ತೈದು ವರ್ಷಗಳು ನಮ್ಮನ್ನು ಸಾಕಿ ಸಲಹಿ ಪ್ರೀತಿ ವಿಶ್ವಾಸ ನೀಡಿದ ಪರಿಸರವನ್ನು ಹುಟ್ಟೂರಿಗೇ ಆದರೂ ಬಿಟ್ಟು ಹೋಗುವಾಗ ಮನಸ್ಸು ಮುದುಡಿತ್ತು. ಹೊರನಾಡಿನಲ್ಲಿದ್ದಾಗ ನಮ್ಮ ಭಾಷೆ, ಸಂಸ್ಕೃತಿ, ನಮ್ಮತನವನ್ನು ಉಳಿಸಿಕೊಳ್ಳುವ

ಪ್ರಯತ್ನವಾಗಿ ಕಟ್ಟಿ ಬೆಳೆಸಿದ ಕನ್ನಡ ಸಂಘದ ಬೆಳವಣಿಗೆಯಲ್ಲಿ ನಮ್ಮೊಡನೆ ಒಡನಾಡಿದವರು ಬಹಳ ಮಂದಿ. ಅವರೆಲ್ಲರ ಸಹವಾಸ ಬಿಟ್ಟು ಹೊರಡುವಾಗ ಏನೋ ಅಮೂಲ್ಯವಾದದ್ದು ಕಳೆದು ಹೋಗುತ್ತಿರುವ ಅನುಭವವಾಗುತ್ತಿತ್ತು. ಇಂತಹ ಸಮಯದಲ್ಲಿ ಆತ್ಮೀಯರಾದವರ ಕಣ್ಣಿಗೆ ಕೈಚೀಲದಿಂದ ಹೊರಗಿಣುಕಿದ್ದ ಅಪರಂಜಿ ಕಣ್ಣಿಗೆ ಬಿದ್ದಳು.

''ಯಾವುದ್ರೀ ಈ ಅಪರಂಜಿ? ನಮ್ಮ ಚಿಕ್ಕಂದಿನ ಕೊರವಂಜಿಯನ್ನು ನೆನಪಿಸುವಂತಿದೆ?'' ಆಗ ಕೊರವಂಜಿ ಕಾಡಿಗೆ ಹೋಗಿದ್ದು, ಮಾನಸ ಪುತ್ರಿ ಅಪರಂಜಿಯನ್ನು ಕನ್ನಡಿಗರು ಅಕ್ಕರೆಯಿಂದ ಸಾಕಿಕೊಳ್ಳಲಿ ಎಂದು ನಾಡಿಗೆ ಕಳಿಸಿದ್ದು ಎಲ್ಲ ಹೇಳಿದೆ, ''ನೀವು ಹೇಗಿದ್ರೂ ಹುಟ್ಟೂರಿಗೆ ಹೋಗ್ತಾ ಇದ್ದೀರಿ. ಅಲ್ಲಿ ಕನ್ನಡ ಪತ್ರಿಕೆಗಳಿಗೆ ಬರವಿಲ್ಲ. ಈ ಅಪರಂಜಿಯನ್ನು ನಮಗೆ ಬಿಟ್ಟುಹೋಗಿ. ನಾವು ಓದುತ್ತೀವಿ'' ಎಂದಾಗ ನಾನಿನ್ನೂ ಓದಿಲ್ಲ ಎಂದು ಹೇಳಲು ಮನಸ್ಸು ಬಾರದೆ ಅಪರಂಜಿ ಕೈಗಿತ್ತೆ.

★★★

ಜನವರಿ ಇಪ್ಪತ್ಮೂರು ಭಾನುವಾರ. ಬೆಂಗಳೂರಿಗೆ ಬಂದು ಹತ್ತು ದಿನಗಳಾಗಿತ್ತು. ಖಾಲಿಯಾಗಿ ಧೂಳು ತುಂಬಿದ್ದ ಮನೆ ಸ್ವಲ್ಪ ಸ್ವಲ್ಪವಾಗಿ ವಾಸಯೋಗ್ಯವಾಗುತ್ತಾ ಬಂದಿತ್ತು. ಆ ಭಾನುವಾರವೇ ಹಾಸ್ಯೋತ್ಸವ ಇರಬೇಕೆಂದು ಮನಸ್ಸು ತರ್ಕಿಸಿತು. ಹೋಗೋಣವೆಂದುಕೊಂಡು ನನ್ನವರನ್ನು ಒಪ್ಪಿಸಿದೆ.

ನಮ್ಮ ಬಳಿ ಒಂದು ವಾಹನವಿದೆ. ಅದಕ್ಕೂ ನಮ್ಮಷ್ಟೇ ವಯಸ್ಸಾಗಿ ಸಣ್ಣಪುಟ್ಟ ಖಾಯಿಲೆಗಳು ಇದ್ದಿದ್ದೇ. ಚೆನ್ನೈ ಬಿಡುವ ಮುಂಚೆ ಅದಕ್ಕೆ ಹೃದಯಬೇನೆ ತಲೆದೋರಿ ಶಸ್ತ್ರ ಚಿಕಿತ್ಸೆಗೆ ಒಳಪಡಿಸಿ ಹತ್ತಾರು ಸಾವಿರ ಕೈಬಿಟ್ಟಿತ್ತು. ನಮ್ಮ ಸಮಾಜದಲ್ಲಿ ಹೆಣ್ಣು ಹೆತ್ತವರನ್ನು ಒಂದು ವಿಧವಾದ ಕನಿಕರದಿಂದ ನೋಡುವುದುಂಟು. ನಮ್ಮನ್ನೂ ಸುತ್ತಲಿದ್ದ ಜನ ಪಾಪ, ವಾಹನವಿಟ್ಟುಕೊಂಡವರು ಎಂದು ಕನಿಕರದಿಂದ ನೋಡತೊಡಗಿದ್ದರು. ಬೆಂಗಳೂರಿಗೆ ಬಂದ ಮೇಲೆಯೂ ಅದರ ಅನಾರೋಗ್ಯ ಮುಂದುವರೆದಿದೆ. ಈಚೆಗೆ ವಯಸ್ಸಿನ ಪ್ರಭಾವದಿಂದ ತುಸು ಅರುಳು ಮರುಳು ಬೇರೆ. ಹೊರಡು ಎಂದಾಗ ಹೊರಡದೆ, ನಿಲ್ಲು ಎಂದಾಗ ನಿಲ್ಲದೆ ತನ್ನ ಸ್ವ ಪ್ರತಿಷ್ಠೆ ತೋರಿಸಿದ್ದುಂಟು. ಇದರಿಂದಾಗಿ ರಸ್ತೆಯ ಜನ, ವಿಶೇಷವಾಗಿ ಸುಸಂಸ್ಕೃತ ಆಟೋ ಚಾಲಕರು ಶುದ್ಧ ಸಂಸ್ಕೃತದಲ್ಲಿ ಉಗಿದದ್ದೂ ಉಂಟು.

ಹಾಸ್ಯೋತ್ಸವಕ್ಕೆ ಹೊರಟ ದಿನ ನನ್ನ ಅದೃಷ್ಟಕ್ಕೆ ವಾಹನವೂ ಒಳ್ಳೆಯ ಮೂಡಿನಲ್ಲಿದ್ದು ಸಕಾಲಕ್ಕೆ ಕಲಾಕ್ಷೇತ್ರ ತಲಪಿದೆವು. ಅಲ್ಲಿ ಉತ್ಸವದ ಚಿನ್ಹೆಯಾಗಿ

ಜನ ಸಮೂಹ, ಕಾರು ಸ್ಕೂಟರುಗಳಾಗಲಿ ಕಾಣಲಿಲ್ಲ. ''ನಮ್ಮ ಕನ್ನಡ ಮಂದಿಗೆ ಸಾಹಿತ್ಯ, ಭಾಷೆ ಅಂದ್ರೆ ಅಷ್ಟಕ್ಕಷ್ಟೆ. ತಮಿಳೋ, ತೆಲುಗೋ ಅಥವಾ ಮಲೆಯಾಳಿ ಚಿತ್ರ ಹಾಕೋದಾದ್ರೆ ಬ್ಲ್ಯಾಕಿನಲ್ಲಿ ಟಿಕೆಟ್ ತೆಗೆದುಕೊಂಡಾದರೂ ಹೋಗಿ ನೋಡ್ತಾರೆ. ಬಂದಿರುವ ಸ್ವಲ್ಪ ಜನ ರಂಗಮಂದಿರದಲ್ಲಿರಬೇಕು'' ಎಂದು ನನ್ನವರಿಗೆ ವ್ಯಾಖ್ಯಾನ ನೀಡುತ್ತಾ ಮುಚ್ಚಿದ್ದ ಬಾಗಿಲು ದಬ್ಬಲು ನೋಡಿದೆ.

''ಏನಮ್ಮ, ಯಾರ್‍ನೀವು? ಇಲ್ಲಿ ಏನು ಮಾಡ್ತಾ ಇದ್ದೀರ?'' ಭಯೋತ್ಪಾದಕರನ್ನು ರಕ್ಷಣಾ ಸಿಬ್ಬಂದಿ ಕೇಳುವಂತೆ ದಬಾಯಿಸಿ ಕೇಳಿದ ಓಡಿ ಬಂದ ಅಲ್ಲಿದ್ದ ಪರಿಚಾರಕ.

''ಹಾಸ್ಯೋತ್ಸವಕ್ಕೇಂತ ಬಂದಿದ್ದೇವೆ.''

''ಹಾಸ್ಯೋತ್ಸವ! ಏನು ಹಾಗಂದ್ರೆ?''

ಪಾಪ, ಪರಿಶೋಚನೀಯ ಪ್ರಾಣಿ, ಜೀವನದ ಜಂಜಾಟದಲ್ಲೇ ಮುಳುಗಿರುವವನಿಗೆ ಹಾಸ್ಯದ ಸ್ವರೂಪವಾದರೂ ಹೇಗರಿವಾಗಿರಬೇಕು? ಹಸಿದವನ ಮುಂದೆ ಮೃಷ್ಟಾನ್ನ ಇಟ್ಟಂತಾಯ್ತು. ನನ್ನ ಕೊರೆತ ಆರಂಭಿಸಿದೆ.

''ನೋಡಪ್ಪ, ಹಾಸ್ಯ ಅನ್ನುವುದು ನವರಸಗಳಲ್ಲಿ ಶೃಂಗಾರದ ನಂತರ ಬಹು ಮುಖ್ಯವಾದದ್ದು. ಮನಸ್ಸನ್ನು ಪ್ರಫುಲ್ಲಗೊಳಿಸುವ, ಮುದ ನೀಡುವ ಸಂತೋಷ ತರುವುದು ಹಾಸ್ಯ. ನಿನಗಿದೆಲ್ಲ ಅರ್ಥವಾಗಲಾರದು. ಹಾಸ್ಯೋತ್ಸವ ಎಂದರೆ ನಗುವ ಹಬ್ಬ ಎಂದಿಟ್ಟುಕೊ ಸಾಕು'' ಆತ ನಾನಿನ್ನೂ ಮುಂದುವರೆಯುವುದಕ್ಕೆ ಬ್ರೇಕ್ ಹಾಕಿದ. ''ಅದೆಲ್ಲಾ ನಂಗೊತ್ತಿಲ್ಲ. ಇಂದು ಇಲ್ಲಿ ಏನೂ ಪ್ರೋಗ್ರಾಂ ಇಲ್ಲ. ಬೇಕಿದ್ರೆ ಒಳಗಿಣುಕಿ ನೋಡಿ. ಒಂದು ನರಪಿಳ್ಳೆ ಇಲ್ಲ. ಮುಂದಿನ ಬಾನ್ವಾರ ಬಂದು ನೋಡಿ, ಆಗಿದ್ರೂ ಇರಬೌದು'' ಅಂತ ಹೇಳಿ ತನ್ನ ಕೆಲಸಕ್ಕೆ ಹೊರಟ.

ವಾಹನದಲ್ಲಿ ಕುಳಿತೊಡನೆ ನನ್ನವರು ರೆಕಾರ್ಡ್ ಹಚ್ಚಿದರು. ''ನಿಂಗೆ ಯಾವಾಗ್ಲೂ ಬಲು ಆತುರ. ಹಾಸ್ಯೋತ್ಸವ ಯಾವತ್ತು, ಎಷ್ಟುಗಂಟೆಗೆ ಅಂತ ಸರಿಯಾಗಿ ತಿಳಿದುಕೊಳ್ದೆ ಇಷ್ಟುದೂರ ಬಂದಿದ್ದೂ ಅಲ್ಲದೆ ನನ್ನನ್ನೂ ಎಳ್ಕೊಂಡು ಬಂದಿದ್ದಿ. ಬರೀ ಉತ್ಸಾಹ ಒಂದಿದ್ರೆ ಸಾಲ್ದು. ಸರಿಯಾಗಿ ವಿವರ ತಿಳ್ಕೋಬೇಕು'' ಇತ್ಯಾದಿ ಮುಂದುವರೆಯಿತು.


ಗಂಟೆ ಆಗಲೇ ಹನ್ನೊಂದಾಗಿತ್ತು. ''ನೋಡಿ, ಆಗ್ಲೆ ಹನ್ನೊಂದಾಯ್ತು. ಇನ್ನು ಮನೆಗೆ ಹೋಗಿ, ಕುಕ್ಕರ್ ಇಟ್ಟೂ, ತರಕಾರಿ ಹೆಚ್ಚಿ, ಕಾಯಿ ತುರುವೀ ಯಾವ ಯುಗಕ್ಕೆ ಊಟ ಮಾಡೋದು? ಆಗ್ಲೆ ಹಸಿವು ಶುರುವಾಗಿದೆ. ಹತ್ತಿರದಲ್ಲಿ ನಮ್ಮವರದ್ದೇ ಹೋಟಲಿದೆಯಂತೆ. ಅಲ್ಲಿ ಪೊಂಗಲ್, ಪುಳಿಯೋಗರೆ, ಸಜ್ಜಪ್ಪ ಎಲ್ಲಾ ಸಿಗುತ್ತಂತೆ. ಹೋಗೋಣ್ವೇ?'' ಸ್ವೀಟಾಗಿ ಕೇಳಿದೆ. ನನ್ನವರಿಗೆ ಸ್ವೀಟೆಂದರೆ ಪ್ರಾಣ. ವಾಹನ ಹೋಟಲಿನತ್ತ ಚಲಿಸಿತು.

ಮುಂದಿನ ಭಾನುವಾರ ನಮ್ಮ ಯಾತ್ರೆ ಮತ್ತೆ ಕಲಾಕ್ಷೇತ್ರದತ್ತ ಹೊರಟಿತು. ಎಲ್ಲಾ ಹಿಂದಿನಂತೆಯೇ ಡಿಟ್ಟೊ, ನಿರ್ಜನ ಆವರಣ, ಮುಚ್ಚಿದ ಕಿಟಕಿ ಬಾಗಿಲುಗಳು. ಅದೇ ಪರಿಚಾರಕ ಎದುರಾದ. ''ಹಿಂದಿನ್ಸಾರ್ತಿ ಬಂದಾಗ ನಗೋ ಹಬ್ಬ ಅಂದ್ರಲ್ಲಾ. ಅದು ಇಪ್ಪತ್ತೈದನೆ ತಾರೀಖು ಆಗೋಯ್ತು. ಅಬ್ಬಾ! ಯಾಪಾಟಿ ಜನ ಬಂದಿದ್ರೂಂತ. ಎಲ್ರೂ ನಕ್ಕೂ ನಕ್ಕೂ ಸುಸ್ತಾಗಿಬಿಟ್ರು'' ನೆನಸಿಕೊಂಡು ತಾನೂ ನಕ್ಕು ತೋರಿಸಿದ.

ವಾಹನವೇರಿ ರೆಕಾರ್ಡ್ ಹಚ್ಚಲು ಅವಕಾಶ ಕೊಡದೆ ನನ್ನವರಿಗೆ ''ಆಗ್ಲೆ ಹನ್ನೊಂದಾಯ್ತು, ಮನೆಗೆ ಹೋಗಿ ಕುಕ್ಕರ್ ಇಟ್ಬೊ....'' ಮುಂದುವರಿಸಲು ಅವರೂ ಅವಕಾಶ ಕೊಡಲಿಲ್ಲ. ಏಕೆಂದರೆ ಅವರಿಗೂ ಅಭ್ಯಾಸವಾಗಿತ್ತಲ್ಲ. ವಾಹನ ಹೋಟೆಲ್ ಮುಂದೆ ನಿಂತಿತು. ಹಸಿದ ಹೊಟ್ಟೆ ತಂಪಾಯಿತು.

ಕಳೆದ ಮೂರು ವರ್ಷದಿಂದ ಪ್ರತಿ ಡಿಸೆಂಬರ್ ಇಪ್ಪತ್ತೈದರಂದು ತಪ್ಪದೆ ಕಲಾಕ್ಷೇತ್ರಕ್ಕೆ ಹೋಗುತ್ತಿದ್ದೇನೆ. ಹೊತ್ತಿಗೆ ಮುಂಚೆ ಹೋದರೂ ಜನ ಅದಕ್ಕಿಂತ ಮುಂಚೆ ಬಂದು ನಾವು ಜಾಗಕ್ಕಾಗಿ ಪರದಾಡುವಂತೆ ಮಾಡಿದ್ದಾರೆ. ನಿಂತೋ, ಕುಳಿತೋ, ಸರ್ಕಸ್ ಮಾಡುತ್ತಲೋ ಆ ಹಾಸ್ಯ ರಸಾಯನ ಆಸ್ವಾದಿಸಿದ್ದೇನೆ. ಹಾಸ್ಯಕ್ಕೆ ಎಷ್ಟೊಂದು ಮುಖಗಳಿವೆ ಎಂದು ವಿಸ್ಮಯ ಪಟ್ಟಿದ್ದೇನೆ. ಅರ್ಧ ವಿರಾಮದಲ್ಲಿ ಹನುಮ ಬಾಲದಂತಹ ಕ್ಯೂನಲ್ಲಿ ನಿಂತು ಹಾಸ್ಯ ಸರಸ್ವತಿಯ ಪ್ರಸಾದ ಸ್ವೀಕರಿಸಿದ್ದೇನೆ. ನಕ್ಕೂ ನಕ್ಕೂ ಹೊಟ್ಟೆ ಹುಣ್ಣಾಗಿಸಿಕೊಂಡಿದ್ದೇನೆ.

ಅಲ್ಲಾ, ಹಾಸ್ಯಕ್ಕೆ ನೋವು, ಹಾಗೂ ರೋಗ ಶಮಕಾರಿ ಗುಣಗಳಿವೆ ಎಂದು ಕೇಳಿದ್ದೇನೆ. ಹಾಗಿದ್ದಾಗ ನಕ್ಕರೆ 'ಹೊಟ್ಟೆ ಹುಣ್ಣಾಗುವುದು' ಹೇಗೆ? ಅದು ನಕ್ಕೂ ನಕ್ಕೂ ಹೊಟ್ಟೆಯ 'ಹುಣ್ಣಾರುವುದು' ಇದ್ದಿರಬೇಕೆಂದು ನನ್ನ ತರ್ಕ. ಯಾರದೋ ಅವಸರದ ಬಾಯಲ್ಲಿ 'ರು', 'ಗು'ವಾಗಿ ಮಾರ್ಪಾಡಾಗಿರಬೇಕೆಂದು ನನ್ನ ನಂಬಿಕೆ. ನೀವೇನಂತೀರಿ?



ಕ್ರಿಕೆಟ್ - ಸಿನಿಮಾ

- ಬಾಗೂರು ಚಂದ್ರು

ಅಂದಿದ್ದದ್ದು ಇಂದಿನ ಹಾಗೆಯೇ. ಸನ್ 2000 ಇಸವಿಯಲ್ಲಿ ನಮ್ಮ ಕ್ರಿಕಟ್ ತಂಡ ಆಸ್ಟ್ರೇಲಿಯಾದಲ್ಲಿ ಆಡಿದ ಮೂರು ಟೆಸ್ಟ್ ಪಂದ್ಯಗಳನ್ನೂ ಸೋತು ಬಂದಂತೆ 1970-1980-1990 ರಲ್ಲೂ ನಮ್ಮ ತಂಡ ಇಂಗ್ಲೆಂಡ್, ವೆಸ್ಟ್ ಇಂಡೀಸ್ ಆಸ್ಟ್ರೇಲಿಯಾಗಳಲ್ಲಿ ಆಡಿದ ಐದೂ ಪಂದ್ಯಗಳನ್ನು ಸೋತು ಬರುತ್ತಿತ್ತು, ಭಾರತದಲ್ಲಿ ವಿದೇಶಿ ತಂಡಗಳು ಆಡಿದಾಗ ಪರಿಸ್ಥಿತಿಯಲ್ಲಿ ಚೂರು ಬದಲಾವಣೆ. ಮೊದಲ ಎರಡು ಟೆಸ್ಟ್ ಪಂದ್ಯಗಳನ್ನು ಕರುಣಾಜನಕವಾಗಿ ಸೋತಮೇಲೆ, ಮೂರನೆಯ ಟೆಸ್ಟ್‌ನ ಎರಡನೆಯ ಇನ್ನಿಂಗ್ಸ್‌ನಲ್ಲಿ ಕುಂದ್ರನ್ ಅಂತಹವರ ಅಡ್ಡಾದಿಡ್ಡಿ ಆಟದಿಂದಲೋ ಅಥವಾ ಅಂದಿನ ಸ್ಟಾರ್ ಬ್ಯಾಟ್ಸ್‌ಮನ್‌ಗಳ ಉತ್ತಮ ಆಟದಿಂದಲೋ ಸ್ಕೋರು 350 ನ್ನು ದಾಟಿದ್ದೂ ಉಂಟು. ಇಂತಹ ಪಂದ್ಯಗಳಲ್ಲಿ ಇನ್ನಿಂಗ್ಸ್ ಸೋಲು ಕೆಲವು ವಿಕೆಟ್‌ಗಳ ಸೋಲಾದಾಗ ನಮಗೆಲ್ಲಾ ಖುಷಿಯೋ ಖುಷಿ. ಅಯ್ಯೋ ಭಾರತ ಎರಡನೆಯ ಇನ್ನಿಂಗ್ಸ್ ಮೊದಲು ಆಡುವ ಹಾಗಿದಿದ್ದರೆ ಗೆದ್ದೂ ಬಿಡಬಹುದಾಗಿತ್ತೇನೋ ಎನ್ನುವ ಸುಖಸಂಕಟ.

ವಿಶ್ವಕ್ಕೆ ಸೊನ್ನೆ ಕೊಟ್ಟ ಭಾರತ, ಒಂದಾದ ಮೇಲೆಯೇ ಎರಡು ಎನ್ನುವ ಕಬ್ಬಿಣ ನಿಯಮವನ್ನೂ ಹೇರಿತ್ತು. ಎರಡನೆಯ ಇನ್ನಿಂಗ್ಸ್ ಮೊದಲು ಆಡುವ ಅವಕಾಶ ನಮಗಿನ್ನೂ ಸಿಕ್ಕೇ ಇಲ್ಲ. ನ್ಯೂಜಿಲೆಂಡ್, ಜಿಂಬಾಬ್ವೆ ಅಷ್ಟೇಕೆ ಭಾರತಕ್ಕೂ ಸೋತಿರುವ ಇಂಗ್ಲೆಂಡ್ ನಾವು ಅಂದಿದ್ದ (ಇಂದೂ ಇರುವ) ಪರಿಸ್ಥಿತಿಯಲ್ಲೇ ಇದೆ. ಎರಡನೆಯ ಇನ್ನಿಂಗ್ಸ್ ಮೊದಲು ಆಡಿ ಗೆಲ್ಲುವ ಬಯಕೆ ಅವರಿಗೂ ಇದ್ದಿರಬೇಕು. ಕರ್ನಾಟಕ ಪಂಗಡದ ವಿರುದ್ಧ ನಾನು ಎಡಗೈಲಿ ಬೇಕಾದರೂ ಆಡಬಲ್ಲೆ ಎಂದು ಗವಾಸ್ಕರ್ ಒಂದು ಕಾಲದಲ್ಲಿ ಅಟ್ಟಹಾಸ ತೋರಿಸಿದಂತೆ ದಕ್ಷಿಣ ಆಫ್ರಿಕಾ ನಾಯಕ ಇಂಗ್ಲೆಂಡ್ ಎರಡನೆಯ ಇನ್ನಿಂಗ್ಸ್ ಮೊದಲು ಆಡುವುದಕ್ಕೂ 'ಸೈ' ಎಂದ. ಜಂಬದ ಕೋಳಿಗೆ ಗೋಳಾಯ್ತು ಎನ್ನುವಂತೆ ಸೋತ - 1999 ರಲ್ಲಿ ಕ್ರಿಕೆಟ್ ಇತಿಹಾಸಕ್ಕೆ ಒಂದು ಹೊಸಪುಟ ಬರೆದ.

ಭಾರತದ ತಂಡ ಆಸ್ಟ್ರೇಲಿಯಾದಲ್ಲಿ ಕಳೆದುಕೊಂಡ ಮಾನವನ್ನು ಸ್ವದೇಶದಲ್ಲಿ ಮತ್ತೆ ಪಡೆಯಲು ಪ್ರಯತ್ನಿಸಬೇಕಾಗಿದೆ. ದಕ್ಷಿಣ ಆಫ್ರಿಕಾ ವಿರುದ್ಧ ಸ್ವದೇಶದಲ್ಲಿ

ಆಡಬೇಕು. ದಕ್ಷಿಣ ಆಫ್ರಿಕಾ ಭಾರತದಲ್ಲೂ ತನ್ನ ಅಟ್ಟಹಾಸ ಪ್ರದರ್ಶಿಸುತ್ತದೆಯೇ? ಭಾರತಕ್ಕೆ ಎರಡನೆಯ ಇನ್ನಿಂಗ್ಸ್ ಮೊದಲು ಆಡುವ ಅವಕಾಶ ಕೊಡುತ್ತದೆಯೇ?

★★★

ಸಿನಿಮಾನಗಳು ನನಗೆ ಅಂದೂ ಅರ್ಥವಾಗುತ್ತಿರಲಿಲ್ಲ. ಈಗಲೂ ಅರ್ಥವಾಗುವುದಿಲ್ಲ. ನಾನು ಮೊದಲು ನೋಡಿದ ತೆಲುಗು ಸಿನಿಮಾದಲ್ಲಿನ ಮುಖ್ಯ ಪಾತ್ರಗಳು ಇಬ್ಬರು ಋಷಿಗಳು. ಇಬ್ಬರಿಗೂ ಪೊದೆಗಡ್ಡ. ಒಬ್ಬರ ನಂತರ ಇನ್ನೊಬ್ಬರಂತೆ ಮೂರು ಮೂರು ಪುಟಗಳ ಸಂಸ್ಕೃತಮಯವಾದ ತೆಲುಗು ಡೈಲಾಗ್ಸ್ ಹೇಳುತ್ತಿದ್ದರು. ಇವರ ಸುತ್ತ ಕತೆ ಬೆಳೆಯುತ್ತಿತ್ತು. ಇವರಲ್ಲಿ ವಸಿಷ್ಠ ಯಾರು, ವಿಶ್ವಾಮಿತ್ರ ಯಾರು ಎನ್ನುವುದು ಕಡೆಯವರೆಗೂ ಅರ್ಥವಾಗಲಿಲ್ಲ - ಕತೆಯ ತಲೆಬಾಲ ತಿಳಿಯಲಿಲ್ಲ. ಚಲನಚಿತ್ರದ 'ಭಾಷೆ' - ಕರಿಗಡ್ಡ ವಿಶ್ವಾಮಿತ್ರ, ಬಿಳಿಗಡ್ಡ ವಸಿಷ್ಠ ಎನ್ನುವುದು ಮೂರು ದಿನವಾದ ಮೇಲೆ ತಿಳಿಯಿತು. ಅವಳಿ-ಜವಳಿಗಳು ಸಿನಿಮಾ ಪ್ರವೇಶಿಸಿದ ಮೇಲೆ ಒಳ್ಳೆಯ ನಾಯಕ - ಕೆಟ್ಟ ಖಳನಾಯಕ ಯಾರು, ಅರವತ್ತು ತುಂಡುಬಟ್ಟೆಯ ಹುಡುಗಿಯರು ಡಾನ್ಸ್ ಮಾಡುತ್ತಿರುವುದು ಕನಸಿನಲ್ಲೇ, ನಿಜದಲ್ಲೇ ತಿಳಿಯುವುದು ಅಸಾಧ್ಯವಾಯಿತು. ಸಿನಿಮಾ ಕತೆಯನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವನ್ನೇ ಬಿಟ್ಟು, ಸಿಂಗಾಪುರದ ಸೀನರಿ, ಸುಮಧುರ ಸಂಗೀತ ಇಂತಹುಗಳ ಮೇಲೆ ಗಮನವಿಟ್ಟುಕೊಳ್ಳುವುದನ್ನು ಈಗ ಅಭ್ಯಾಸ ಮಾಡಿಕೊಂಡಿದ್ದೇನೆ.

ಸಿನಿಮಾ ಕತೆ ಅರ್ಥವಾಗದಿದ್ದರೂ ಸಿನಿಮಾ ಹೆಸರುಗಳನ್ನು ಅರ್ಥ ಮಾಡಿಕೊಳ್ಳುವುದರಲ್ಲಿ ಈಚೀನವರೆಗೂ ಯಾವುದೇ ತೊಂದರೆಯಿರಲಿಲ್ಲ. ಕನ್ನಡ ಸಿನಿಮಾ ಒಂದರ ಹೆಸರು '?' ಆದಾಗ - ಇದು ಪ್ರಶ್ನಾರ್ಥಕ ಚಿಹ್ನೆ ಎನ್ನುವ ಕನ್ನಡ ಹೆಸರಿನ ಕನ್ನಡ ಸಿನಿಮಾವೋ ಅಥವಾ ಕ್ವೆಷ್‌ಚನ್‌ಮಾರ್ಕ್ ಎನ್ನುವ ಇಂಗ್ಲೀಷ್ ಹೆಸರಿನ ಕನ್ನಡ ಸಿನಿಮಾವೋ ಎನ್ನುವ ಗೊಂದಲವಿತ್ತು ಈಗ ಕೆಲವು ವರ್ಷಗಳ ಹಿಂದೆ 'ತುತ್ತಾಮುತ್ತಾ' ಎನ್ನುವ ಕನ್ನಡ ಸಿನಿಮಾದ ಹೆಸರು ಕೇಳಿದಾಗ ಹದಿನಾರಾಣೆ ಕನ್ನಡಿಗನಾದ ನನಗೆ ಕನ್ನಡ ಸಿನಿಮಾಗಳ ಹೆಸರೇ ಅರ್ಥವಾಗದಂತಾಯಿತೆ ಎಂದು ಗಾಬರಿಯಾಗಿತ್ತು. ಸಿನಿಮಾ ಭಾಷೆಯ ಮೇಲಿನ ಪ್ರಭುತ್ವವಿರುವವರಿಂದ ಇದರ ಪೂರ್ಣರೂಪ - (ಮಾತೆಯು ಮಮತೆಯಿಂದ ಬಡಿಸುವ ತುತ್ತೇ ಅಥವಾ ಪ್ರೇಯಸಿ ಕೊಟ್ಟ ಮುತ್ತೇ ಇವುಗಳಲ್ಲಿ ಯಾವುದು ಮುಖ್ಯ?) ತಿಳಿಯಿತು. ಇಲ್ಲಿ ಬ್ರಾಕೆಟ್‌ನಲ್ಲಿರುವುದನ್ನೆಲ್ಲಾ ಬಿಟ್ಟರೂ 'ತುತ್ತೇ-ಮುತ್ತೇ' ಸಿನಿಮಿಯಾ 'ತುತ್ತಾ ಮುತ್ತಾ' ಹೇಗಾಯಿತು ಇನ್ನೂ ತಿಳಿದಿಲ್ಲ.

ಈಚೆಗೆ ಕನ್ನಡ ಪತ್ರಿಕೆಯ ಶುಕ್ರವಾರದ ಸಿನಿಮಾಪುಟಗಳಲ್ಲಿ 'ಹಾಲಿನಲ್ಲಿ

ಚಂದ್ರಬಿಂಬ' ಎನ್ನುವ ಸಿನಿಮಾ-ಕತೆಯ ಬಗೆಗೆ ದೊಡ್ಡ ವಿವಾದವಿತ್ತು. ಈ ಹೆಸರು ಕೇಳಿದಾಗಿನಿಂದ ನಾನು ಮತ್ತೆ ಗೊಂದಲದಲ್ಲಿದ್ದೇನೆ. ಚಂದ್ರ-ಪೂರ್ಣಿಮೆಯ ಚಂದ್ರ, ಚತುರ್ದಶಿಯ ಚಂದ್ರ, ಬೆಳದಿಂಗಳ ಬಾಲೆ - ಇಂತಹ ಸಾವಿರಾರು ಸಿನಿಮಾ ಹೆಸರುಗಳನ್ನು ಕೊಟ್ಟಿದ್ದಾನೆ. ಚಂದ್ರಬಿಂಬದ ಬಗೆಗೆ ಏನೇನು ತಕರಾರಿಲ್ಲ ಆದರೆ ಹಾಲು-ಸಸ್ತನಿಗಳಿಂದ ಬರುವ ಬಿಳಿದ್ರವ - 'ಹಾಲು ಜೇನು' 'ಹಾಲುಂಡ ತವರು' ಇಂತಹ ಚಿತ್ರಗಳಿಗೆ ಹೆಸರು ಕೊಟ್ಟಿದೆ. ಆದರೆ ಬಿಳಿದ್ರವದಲ್ಲಿ ಬೆಳ್ಳಿ ಚಂದ್ರನ ಬಿಂಬ ಕಾಣಿಸುತ್ತದೆಯೇ ತಿಳಿನೀರಿನ ಕೊಳದಲ್ಲಿ ಚಂದ್ರಬಿಂಬವನ್ನು ಕಂಡು ಹಲವು ಕವಿಗಳು ಕುಣಿದಾಡಿದ್ದಾರೆ. ಡಬಲ್ ರಿಫೈನ್ಡ್ ವೆಜಿಟೆಬಲ್ ಆಯಿಲ್‌ನ ಡ್ರಮ್ಮಿನಲ್ಲಿ ಚಂದ್ರಬಂಬ ಕಂಡರೆ ಆಶ್ಚರ್ಯ ಪಡಬೇಕಾಗಿಲ್ಲ. ಚಂದ್ರ ಹುಟ್ಟಿದ್ದೇ ಕ್ಷೀರಸಾಗರದಿಂದಲಂತೆ. ದಾಸರು ಭಾಗ್ಯದ ಲಕ್ಷ್ಮಿಯನ್ನು ಮಜ್ಜಿಯೊಳಗಿನ ಬೆಣ್ಣೆಯಂತೆ ಬಾ ಎಂದು ಹೇಳಿದಂತೆ, ಬಿಳಿ ಹಾಲಿನ ಸಮುದ್ರದಿಂದ ಬಿಳಿ ಚಂದ್ರ ಬಂದಿದ್ದನ್ನೂ ಕಾಣಬಹುದಾಗಿತ್ತೇನೋ. ಆದರೆ ಬಿಳಿ ಹಾಲಿನಲ್ಲಿ ಚಂದ್ರಬಿಂಬ? ಏನಾದರೂ ಆಗಲಿ ಪ್ರತ್ಯಕ್ಷವೇ ಪ್ರಮಾಣ ಎಂದು ನಮ್ಮ ಮನೆಯ ಬಾಲ್ಕನಿಯಲ್ಲಿ ಹಾಲಿನ ಪಾತ್ರೆ ತೆಗೆದುಕೊಂಡು ಹೋಗಿ ನೋಡಿದೆ. ಹಾಲಿನಲ್ಲಂತೂ ಸುತರಾಂ ಚಂದ್ರಬಿಂಬ ಕಾಣಲಿಲ್ಲ ಹೊಳೆಯುತ್ತಿದ್ದ ಸ್ಟೀಲ್ ಪಾತ್ರೆಯಲ್ಲಿ ಕಂಡಿತು ನಿಜ. ನಾನು ಈ ಅರ್ಥಗೊಂದಲದಲ್ಲಿದ್ದಾಗ ನನ್ನ ಹೆಂಡತಿ - 'ಅಯ್ಯೋ ಹಾಲು ಎಂದರೆ ಡೈರಿ ಹಾಲೇ ಆಗಬೇಕೆ, ಬೆಂಗಳೂರಿನಲ್ಲಿ ನಮ್ಮ ಮನೆಯಲ್ಲಿ ನಾವೆಲ್ಲ ಮಲಗಿಕೊಳ್ಳುತ್ತಿದ್ದ ಹಾಲಿನಲ್ಲಿ ಎಷ್ಟು ಚೆನ್ನಾಗಿ ಚಂದ್ರನ ಬೆಳಕು ಬೀಳುತ್ತಿತ್ತು' ಎಂದು ತನ್ನ ಬಾಲ್ಯ ಜ್ಞಾಪಿಸಿಕೊಂಡಳು. ಸಿನಿಮಾ ಹೆಸರು ನನಗೆ ಅರ್ಥವಾಗುವುದಿಲ್ಲ ಎನ್ನುವುದು ಮತ್ತೂ ಕನ್‌ಫರ್ಮ್ ಆಯಿತು.



''ನೀನು 'ಹಾಯ್ ಕ್ಯೂಟಿ' ಅನ್ನಬೇಕಾಗಿತ್ತು. ಆಗ smile ಮಾಡಿರೋಳು''

ಮಾತು - ವೃತ್ತಿ

– ನೀರರುಂದ ಕೇಶವಮೂರ್ತಿ ರಾವ್

ಬರೆಯೋಕೆ ಏನೂ ತೋಚ್ದೆ ಬುರ್ದೆ ಬೋರಾಗಿತ್ತು. ಇದ್ದಕ್ಕಿದ್ದಂಗೆ ಸೋದ್ರಮಾವ್ನ ಮಗ ಮಾತ್ಗಾರ ಮಲ್ಲಣ್ಣ ಮನೆಗ್ಬಂದ. ಮಾತ್ಗಾರ ಮಲ್ಲಣ್ಣನ ಮಾತೂಂದ್ರೆ ಮಾತು! ಅವನ್ಗೆ ಹಾಸ್ಯ, ಹರಟೆ, ಅಣ್ಕದ ಪದಗಳೂಂದ್ರೆ ತುಂಬಾ ಇಷ್ಟ. ಬೀchi ಗೀಚಿದ್ದು ಅಚ್ಚುಮೆಚ್ಚು! ರಾ.ಶಿ. ಬರಹಾಂದ್ರೆ ತುಂಬಾ ಖುಷಿ!! ನಾಡಿಗೇರ್ ಅಂದ್ರೆ, ನಗೆಯ ನಾಡಿಯ ಗೇರನ್ನೇ ಏರ್ಸ್ಸೋರು!!! ಮಾತುಗಾರ ಮಲ್ಲಣ್ಣ ಹಾವು ಹಿಡಿದ್ರೂ, ಹಾಸ್ಯಬಿಡ!

ಅದೂ ಇದೂ ಮಾತಾಡ್ತ ಈಚೆಗೇನೂ ಬುರ್ಡೆ ಬಿಡ್ಲಿಲ್ಲಾಂತಾ ಕಾಣುತ್ತೆ ಅಂತಾ ಅಂದಾಗ ನನ್ಸಿಟ್ಟು ನೆತ್ತಿಗೇರಿದ್ದು ಕಂಡು ''ಬಾಜೀರಾಯ್ರೆ ಸಿಟ್ಟಾಗ್ಬೇಡಿ. ನಿಮ್ಮ ಮಾತ್ನಲ್ಲೆ ನಿಮ್ಮ ವೃತ್ತಿ ವ್ಯಕ್ತವಾಗೋದರಿಂದ ಹಾಗಂದೆ''! ತಪ್ಪು ತಿಳ್ಕೋಬೇಡಯ್ಯಾ. ಮಸಲಾ ಮಾತಿಗ್ಹೇಳ್ತೀನಿ ಮನುಷ್ಯ ಸಾಮಾನ್ಯವಾಗಿ ಯಾವ ವೃತ್ತಿ ಮಾಡ್ತಾನೋ, ಅವನ ಮಾತು ಅದೇತರಾ ಇರುತ್ತೆ. ಅಂದ್ರೆ ನೀನು ಬುರ್ಡೆ ಬಿಡ್ತಿಯಾಂತಲ್ಲ. ಯಾವನೋ ಒಬ್ಬ ಹೇಳಿದಾನೆ ''ಮಾತು ಕೆಲಸಗಳ ನೆರಳುಗಳು'' ಅಂತ. ಬೇಕಾದ್ರೆ ಬರ್ಕೊ ನನ್ನ ರಾಯ ಅಂದಾಗ ಬುರ್ಡೆ ಬಾಜಿರಾಯರು ಸುಸ್ತು.

ಮಾತುಗಾರ ಮಲ್ಲಣ್ಣ 'ಮಾತು-ವೃತ್ತಿ' ಕುರಿತು ಹೇಳಿದ ವ್ಯಕ್ತಿಗಳಲ್ಲಿ ಕೆಲವು.

ಚಿನಿವಾರ

(ಮಗಳಿಗೆ ಮದುವೆ ಗೊತ್ತಾದ ಸಂದರ್ಭದಲ್ಲಿ ಬೀಗರೊಂದಿಗಿನ ಮಾತುಕತೆ)

ಬೀಗರ ಪ್ರಶ್ನೆ : ಯಜಮಾನರಿಗೆ ಮಕ್ಕಳೆಷ್ಟೊ?

ಉತ್ತರ : ನವರತ್ನಗಳು ಸ್ವಾಮಿ!

ಪ್ರಶ್ನೆ : ಮದುಮಗಳ ವಿಶೇಷ?

ಉತ್ತರ : ಸ್ವಾಮಿ ಅಪ್ಪಟ ಚಿನ್ನ. ಅಪರಂಜಿ ಸ್ವಾಮಿ! ಇನ್ನೇನು ಬೇಕು?

★★★

ಪ್ರಿಂಟ್ರಿಂಗ್ ಪ್ರೆಸ್ ಮಾಲೀಕ

(ಇಬ್ಬರು ಮಕ್ಕಳು ಪ್ರೆಸ್ಸಿನೊಳಗೆ ಆಗಮಿಸಿದಾಗ)

ಸಹೋದ್ಯೋಗಿಗಳು : ಏನ್ಸಾರ್ ಅವಳಿ ಮಕ್ಕಳೂಂತ ಕಾಣುತ್ತೆ ವ್ಯತ್ಯಾಸವೇ ಇಲ್ಲ.

ಮಾಲೀಕ : ಏನು ಹಾಗಂತೀರ! ಪ್ರಿಂಟೆಡ್ ಅಂಡ್ ಪಬ್ಲಿಷ್ಡ್ ಇನ್ same press ಅಂದ್ರೆ ನಾನೇ ಮಾಲೀಕ.

★★★

ಮೋಟಾರ್ ಮೆಕ್ಯಾನಿಕ್

ಸ್ಕೂಟರ್ ರಿಪೇರಿಗೆ ಹೋದಾಗ - ಮೆಕ್ಯಾನಿಕ್ ಮಾತಾಡ್ತ ''ಸಾರ್, ತಾವು ಏನ್ ಆಹಾರ ತಗೋತಿರಾ'' ಅಂದ. ''ನಮ್ದು ಗೊತ್ತಲ್ಲ ಪುಳ್ಚಾರು'' ಅಂದೆ. ಆತ ಮೆಕ್ಯಾನಿಕ್ ಭಾಷೆಯಲ್ಲಿ ''ರಾಗಿಮುದ್ದೆ ತಗಳೀಸಾ ಒಳ್ಳೆ ಮೈಲೇಜ್ ಕೊಡ್ತದೆ'' ಅನ್ನೋದೆ.

★★★

ದಂತವೈದ್ಯ

''ಏನ್ಸಾಮಿ ನಿಮ್ಮ ಅಳಿಯನ್ದು ಇನ್ನು ತಕರಾರು ಮುಗಿದಿಲ್ಲಾಂತ ಕೇಳ್ದೆ. ನಾನ್ಮೊದ್ಲೆ ಬಡ್ಕೊಂಡೆ ನನ್ನ ಹತ್ರ ಕಳ್ಸೀಂತ... ನೀವೊ ಯಾಕ್ಬಿಡಿ ಆಮಾತು. ಬಂದಿದ್ರೆ 32 ಹಲ್ಲು ಉದುರ್ಸಿ ನಿಮ್ಮ ಮಗಳ ಮುಂದೆ ಹಲ್ಕಿತ್ತ ಹಾವಿನ ಥರ ಬಿದ್ದಿರೋ ಹಾಗೆ ಮಾಡ್ತಿದ್ದೆ.''

★★★

ಜಟ್ಕಾಸಾಬಿ

(ರಿಕ್ಷಾ ಇಲ್ಲದ ಕಾಲದಲ್ಲಿ ಜಟಕಾದಲ್ಲೆ ಹೋಗಲೋ ಬೇಡವೋ ಎಂದು ಅನುಮಾನಿಸುವ ಪ್ರಯಾಣಿಕನಿಗೆ)

ಜಟ್ಕಾಸಾಬಿ : ಸಾಮಿ ಮಂಕುತಿಮ್ಮ ಹೇಳವ್ನಲ್ಲ ಆ ಜಟ್ಕಾಬಂಡಿ ಇದಲ್ಲ. ಆ ಸಾಯೇಬ್ನು ನಾನಲ್ಲ. ನೀವೇಳಿದ ಕಡೆಗೆ ಓಡುಸ್ತೀನಿ ಬನ್ನಿ.

★★★

ಹೀಗೆ ಹೇಳ್ತಾ ಹೋದ್ರೆ ಮಾತಿಗೆ ಮೊದ್ಲಿಲ್ಲ ಕೊನೆಯಿಲ್ಲ. ಅಂತ ಮಾತುಗಾರ ಮಲ್ಲಣ್ಣ ಬುರ್ಡೆ ಬಾಜಿರಾಯನಿಗೆ ಸಮಾಧಾನ ಮಾಡ್ಬೇಕಾಯ್ತು.

ಪುಸ್ತಕ ಪರಿಚಯ

– ಈರಪ್ಪ ಎಂ. ಕಂಬಳಿ

''ಬಿಡುಗಡೆಯ ಸಡಗರ'' (ಹಾಸ್ಯ ಪ್ರಬಂಧಗಳು)

ಲೇಖಕಿ : ಡಾ॥ ಗುರುದೇವಿ ಹುಲೆಪ್ಪನವರಮಠ

ಪುಟ : 96

ಬೆಲೆ : ರೂ. 25-00. 1997

ಪ್ರಕಾಶನ : ಮಹಿಳಾ ಸಾಹಿತ್ಯಿಕಾ ವೇದಿಕೆ, ನವನಗರ, ಹುಬ್ಬಳ್ಳಿ - 580 025.

ನಿರಂತರವಾಗಿ ಕನ್ನಡದಲ್ಲಿ ಹಾಸ್ಯ ಸಾಹಿತ್ಯ ಉಣಬಡಿಸಿಕೊಂಡು ಬಂದ ಟಿ. ಸುನಂದಮ್ಮ, ಭುವನೇಶ್ವರಿ ಹೆಗಡೆಯವರ ಸಾಲಿಗೆ ಮತ್ತೊಂದು ಸೇರ್ಪಡೆ. ಪ್ರೊ॥ ಗುರುದೇವಿ ಹುಲೆಪ್ಪನವರ ಮಠ ಎಂದರೆ ಮತ್ತದೇ ಕ್ಲೀಷೆಯಾದೀತು. 1993 ರಲ್ಲಿ 'ನನ್ನಜ್ಜಿ ಗುಜ್ಜಿ' ಪ್ರಕಟಿಸಿದಾಗಲೇ ಇವರು ಆ ಎಲ್ಲಾ ನಿರೀಕ್ಷೆ ಹುಟ್ಟಿಸಿದ್ದರು. 1997ರ ಸಾಲಿನಲ್ಲಿ 'ಬಿಡುಗಡೆಯ ಸಡಗರ' ಎಂಬ ಹಾಸ್ಯ ಪ್ರಬಂಧಗಳನ್ನು ನೀಡಿದ್ದಾರೆ. ಕ್ರಮೇಣ ಇವರ ಬರವಣಿಗೆ ಲಘು/ಹರಟೆ ಪ್ರಕಾರವನ್ನು ಮೀರಿ ಇಲ್ಲಿ ಪ್ರಬಂಧವಾಗುತ್ತಿರುವ ಸೂಚನೆ ತೋರಿದ್ದಿದೆ.

ಸದ್ರಿ ಲೇಖಕಿಯ ಮೊದಲ ಕೃತಿ 'ನನ್ನಜ್ಜಿ - ಗುಜ್ಜಿ' ಯಲ್ಲೆ ನನ್ನ ಅಜ್ಜಿಯ ಸಾಹಚರ್ಯ ತಿಳಿಸುವಾಗಿನ ಆಪ್ತತೆ ಹಾಗೂ ಆ ಲವಲವಿಕೆ ತುಸು ಕಮ್ಮಿಯಾದಂತೆ ಅನ್ನಿಸಿದರೂ 'ಬಿಡುಗಡೆಯ ಸಡಗರ'ದಲ್ಲಿ ಸಂಕಲಿತವಾದ ಬರಹಗಳು ನಿರೂಪಣೆಯ ದೃಷ್ಟಿಯಿಂದ ಪ್ರಬುದ್ಧತೆ ಪಡೆದುಕೊಳ್ಳುತ್ತಿರುವ ಲಕ್ಷಣ ಹೊಂದಿವೆ. ಬಿಡುಗಡೆಯ ಸಡಗರ, ಒಂದೇ ಮನವಿ, ಚಿಲ್ಲರೆ ಪುರಾಣ, ಬೇಕೆನಿಸಿತೊಂದು ಮನೆ, ದೂರವಾಣಿಯು ನಮ್ಮನ್ನು ದೂರ ಮಾಡಿತು - ಇವು ಅಪ್ಪಟ ಲಲಿತ ಪ್ರಬಂಧವಾಗುವ ಗುಣ ಹೊಂದಿವೆ. ಅಲ್ಲಲ್ಲಿ, ಆಗಾಗ ಹಾಸ್ಯವನ್ನೂ ಹೊಮ್ಮಿಸುತ್ತವೆ.

ಇಂಗ್ಲೀಷ್ - ಕನ್ನಡ ಎರಡೂ ಭಾಷೆ ಬಲ್ಲವರಾದುದರಿಂದಾಗಿ, ಗುರುದೇವಿಯವರ ಲೇಖನಿ 'ಟಂಕಿ' ಸುವ ಪದಗಳೇ ಒಂದು ಸೊಗಸು. ಪ್ರಿನ್ಸಿ (ಮಹಿಳಾ ಪ್ರಿನ್ಸಿಪಾಲರು), ಮಂಕಿಗಾಡ್ ದರ್ಶನ, ಸಿನಿಮಾಗೋ ಆರ್ಸ್, ಕಾರ್ನರ್ಸ್, (ರಿ) ಪೀಟರ್, ಧೂಮ್ರಪಾನಿ ವ್ಯಸನಿಗಳು, ಎಕ್ಸ್‌ರ್‌ಸೈಜು (ಫಿಸಿಕಲ್)


ಇ.ಇ.ಗಳು, ತುಟಿ ಸಹಾನುಭೂತಿಯೊಂದಿಗೆ ಕನಿಕರಿಸುವವರು, ನೂರೆಂಟು ನಮೂನೆಯ ಬಜಾರ್ ಡ್ಯಾಶ್‌ಗಳನ್ನು ಸಹಿಸಿಕೊಂಡೂ; ಪ್ರೈವಸಿಯ ತೀವ್ರ ಅಭಾವವನ್ನನುಭವಿಸುವವರು; ನೆಲ - ಮುಗಿಲು ಏಕು ಮಾಡಿ ರೋಧಿಸುವವರು; ಮೂರು ತರದ ಮಾರಿ (ಇಳಮಾರಿ - ಕೆಳಮಾರಿ - ಅಳುಮಾರಿ) ಟಿ.ವಿ. ಮುಂದೆ ಮಂಡಿಸಿದ್ದ ಬೆಲ್ಲದ ಪೆಂಟಿ - ಹೀಗೇ ಉದಾಹರಿಸುತ್ತ ಹೋಗಬಹುದು.

ಇವರ ನಿರೂಪಣಾ ಶೈಲಿಯ ಸಣ್ಣ ಸ್ಯಾಂಪಲ್ಲು: 'ನಿಧಾನವಾಗಿ ಚಲಿಸುವ ಬಸ್ಸು, ನಿಶ್ಯಬ್ದ ವಾತಾವರಣ, ಕಿಟಕಿಗಳಿಂದ ತೂರಿ ಬರುವ ಸುಳಿಗಾಳಿ, ನಿಶ್ಚಿಂತತೆಯಿಂದ ಕುಳಿತಿರುವವರನ್ನು ನಿಶ್ಚಿತವಾಗಿ ನಿದ್ದೆಗೆಳೆಯುತ್ತದೆ. ನಿದ್ದೆಯಲ್ಲಿ ಪಂಚೇಂದ್ರಿಯಗಳೆಲ್ಲ ನಿಸ್ತೇಜವಾಗಿ ಜ್ಞಾನೇಂದ್ರಿಯಗಳ ಶಕ್ತಿ '0' ಡಿಗ್ರಿಗಿಳಿದು ಹಸುಗೂಸಿನ ಚಲನವಲನ ಹೊಂದಿದ ಸಹ ಪ್ರಯಾಣಿಕನ ಭಾರವಾದ ಕತ್ತು ದೊಪ್ಪಂದು ನಮ್ಮ ಭುಜದ ಮೇಲೆ ಬೀಳುತ್ತದೆ (ಪುಟ 82).


ಹೀಗೇ ಅನೇಕ ಕಾರಣಗಳಿಗಾಗಿ ಪ್ರೊ|| ಗುರುದೇವಿ ಹುಲೆಪ್ಪನವರ ಮಠದ ಬರವಣಿಗೆ ಗಮನ ಸೆಳೆಯುತ್ತದೆ. ಇವರು ಇನ್ನಷ್ಟು ಇಂಥವೇ ಬರವಣಿಗೆ ನೀಡುವ ಮೂಲಕ ಕನ್ನಡ ಹಾಸ್ಯ ಸಾಹಿತ್ಯದ ಉಡಿ ತುಂಬುತ್ತಿರಲಿ ಎಂದು ಹಾರೈಸೋಣ.

ಮುದ್ರಾರಾಕ್ಷಸನ ಹಾವಳಿ

ದೇವರ ಖರೀದಿ !!



ಮದ್ಯ ಸರೋವರ !!



ಕಾಲ್‌ಶೀಟ್ ಕಮಲಾಬಾಯಿ

– ಎಂ.ಎನ್.ಕೆ.

ಅವತ್ತು ಗುಂಪಿನಲ್ಲಿದ್ದೋರೆಲ್ಲಾ ಬರೀ ನಮ್ಮ ARP ಗಳೇ. ಅರ್ಥಾತ್ America Returned Parents. ಮಾತೆಲ್ಲಾ ಅವರ ಮಗನಿಗೆ ಸಂಬಳಾ ಎಷ್ಟು, ಅವನ ಕಾರಿಗೆ ದುಡ್ಡೆಷ್ಟು, ಇವರು ಎಲ್ಲೆಲ್ಲಿ ಹೋಗಿದ್ದು, ಒಂದು ಡಾಲರ್‌ಗೆ Ice Cream Sundae ಎಷ್ಟು ಸಿಕ್ಕುತ್ತೆ, ಅವರವರ ಮಕ್ಕಳು ಎಷ್ಟು ಫಾಸ್ಟ್ ಆಗಿ ಡ್ರೈವ್ ಮಾಡ್ತರೆ, ಬರೀ ಇವೇ. ಬರೀ ಬೋರು. ಆ ಗುಂಪಿನಲ್ಲಿ ಸಿಕ್ಕಿಹಾಕಿಕೊಂಡ ಪ್ರಾಣಿ ನಾನ್ ಎ.ಆರ್.ಪಿ. ಅಂದರೆ ನಾನೊಬ್ಬನೇ. ಅದಕ್ಕೇ ಎಲ್ಲಾರೂ ನನಗೇ Address ಮಾಡ್ತಿದ್ದಿದ್ದು ಅವರ Experiences. ನಾನೇ ಅಂದಿನ ಸ್ಕೇಪ್ ಗೋಟ್. ನಾನು ನನ್ನ Experiences ಹೇಳೋಹಾಗಿಲ್ಲಾಂತ ಗೊತ್ತು ಅವರಿಗೆಲ್ಲಾ ಚೆನ್ನಾಗಿ.

ನಾನೂ ಕೇಳ್ದೇ ಕೇಳ್ದೇ ಬೋರಾಗೋವರೆಗೂ. ಆಮೇಲೆ ಬಿಟ್ಟೆ ನನ್ನ ರಾಮ ಬಾಣಾನ; "ನೀವೇನೇ ಹೇಳಿ ನಮ್ಮ ಕಾನಕಾನಹಳ್ಳಿ ರಿಟೈರ್ಡ್ ಜೋಡೀದಾರ್ ವೆಂಕಟರಾಮಯ್ಯನೋರ ಮೂರನೇ ಕುಟುಂಬ ಕಮಲಾಬಾಯೀಗೇ ಗೊತ್ತಿರೋ ಅಷ್ಟು ಅಮೇರಿಕಾ ವಿಚಾರ ನಿಮಗ್ಯಾರಿಗೂ ಗೊತ್ತಿರೂ ಹಾಗಿಲ್ಲಾ" ಅಂದೇಬಿಟ್ಟೆ.

ಇಡೀ ಸಮೂಹ ಶಾಕ್ ಆಗಿ ನನ್ನೇ ಛಾಲೆಂಜ್ ಮಾಡ್ತೂ. ಆ ಕಮಲಾಬಾಯಿ ಯಾರು, ಆಕೆಗೆ ಅದೇನು ಅಷ್ಟು ಗೊತ್ತಿರೋದೂಂತ ಡಿಮಾಂಡ್ ಮಾಡ್ತೂ ಆ ಸಮೂಹಾ. ಇಂಥಾ ಛಾನ್ಸ್ ಕಳಕೊಳ್ಳತೀನಾ ನಾನು? ಬಿಟ್ಟೇ ನನ್ನ ಬಂಡೀನಾ; "ನಮ್ಮ ಕಮಲಾಬಾಯೀ ತಮ್ಮ ಆರೂ ಹೆಣ್ಣುಗಳನ್ನ ಕ್ಯಾಲಿಫೋರ್ನಿಯಾಗೇ ಕೊಟ್ಟಿರೋದು. ಜೊತೆಗೆ ಅವರ ತಂಗಿ ವೆಂಕೂಬಾಯಿ ಮೂರೂ ಹೆಣ್ಣು ಅಲ್ಲೇ ಇರೋದು. ಒಟ್ಟು ಒಂಭತ್ತೂ ಮಕ್ಕಳ ಹತ್ತೊಂಬತ್ತೂ ಚಿಲ್ಲರೇ ಬಾಣಂತನಾನ ನಮ್ಮ ಕಮಲಾಬಾಯೀನೇ ನಿಭಾಯಿಸಿದರೂಂದ್ರೇ ನೀವು ನಂಬೋಲ್ಲಾಂತ ನನಗೆ ಗ್ಯಾರಂಟೀ ಗೊತ್ತು.

Sometimes ಎರಡೂ ಮೂರು ಬಾಣಂತನಾನಾ Simultaneous ಆಗಿ Handle ಮಾಡಿರೋ ಗಟ್ಟಿಗಿತ್ತಿ ಆಕೆ. ನಮ್ಮ ಕಮಲಾಬಾಯೀ ಸ್ಪೆಶಲ್ ಬಾಣಂತೀ ಶುಂಠೀ ಲೇಹ್ಯ ತಿಂದರೆ ಮಗು ಬಾಣಂತೀ ಲಕಲಕ ಹೊಳೀತ ಆರೋಗ್ಯವಾಗಿರ್ತಾರೇ ಅನ್ನೊ ರೂಮರ್ ಇಡೀ ಕ್ಯಾಲಿಫೋರ್ನಿಯಾಲೇ ಕಾಳ್ಗಿಚ್ಚಿನಂತೆ ಹಬ್ಬಿದೆಯಂತೆ. ಆ ಲೇಹ್ಯಕ್ಕೆ ಸಿಕ್ಕಾಪಟ್ಟೇ ಡಿಮಾಂಡ್ ಬೇರೆ ಅಂತೆ.

ಅದ್ರ ರುಚಿ ಕಂಡ ಒಬ್ಬ ಗಂಡ ಮೂರೇ ದಿನದಲ್ಲಿ ಪೂರ್ತಾ ಬಾಟಲ್ ತಿಂದು ತನ್ನ ಬಾಣಂತೀ ಹೆಂಡತೀಗೂ ಇಲ್ಲದೇ ಮಾಡಿದನಂತೆ. ಬರೀ ಅಂತೆ ಕಂತೆ. ನಿಜ ನಂಗೊತ್ತಿಲ್ಲ. ಅವನಿಗೆ ಏನೇನೂ side effects ಆಗಲೇ ಇಲ್ಲಾಂತ ನನಗೆ ಕಮಲಾಬಾಯೀನೇ ಹೇಳಿದ್ರೂ.

ನಮ್ಮ ಕನಕನಪಾಳ್ಯದ ಕಮಲಾಬಾಯಿ los Angeles, San francisco Airport ಗಳಲ್ಲಿ ಎಷ್ಟು ಪಾಪ್ಯುಲರ್ ಅಂದರೆ ತಮ್ಮ ಗಂಡ ಜೋಡೀದಾರ್ ವೆಂಕಟೇಶಯ್ಯನೋರು ಸಾಮಾನಿನ ಗಾಡೀ ತಳ್ಳಿಕೊಂಡು ಮುಂದೆ ಹೋಗ್ತಿದ್ದರೆ ಹಿಂದೆ ಕೈಬೀಸಿಕೊಂಡು ಕಮಲಾಬಾಯಿ ಅಲ್ಲಿನ ಕಸ್ಟಂಸ್‌ನೋರಿಗೆ ಬೈ ಬೈ ಹೇಳ್ತಾ ಹೋಗ್ತಾ ಇದ್ರೆ ಇವರ ಸೂಟ್‌ಕೇಸ್ ಚೆಕ್ಕೇ ಮಾಡೋದಿಲ್ವಂತೆ.

ಒಂದ್ಸಲ ಕಸ್ಟಂಸ್‌ನಲ್ಲಿ ಕಮಲಮ್ಮನೋರ ಪರಿಚಯ ಇಲ್ಲದ ಒಬ್ಬ ಕರೀ ಹುಡುಗಿ ಇವರ ಸೂಟ್‌ಕೇಸ್‌ನಲ್ಲಿದ್ದ ಲೇಹದ್ಯ ಬಾಟಲ್ ತೋರಿಸಿ ಇದೇನೂಂತ ಕೇಳ್ದಾಗ ಕಮಲಮ್ಮನೋರು ಅದರ ಮುಚ್ಚಳ ತೆಗೆದು ಆ ಹುಡುಗಿ ಮೂತಿಗಿಟ್ಟಾಗ ಆಕೆಗೆ ತಲೇ ಸುತ್ತು ಬಂದು "You may proceed, you may proceed' ಅಂತ ಕೂಗಿದಳಂತೆ.

ಹೊರಗೆ ಬಂದಾಗ ವೆಂಕಟೇಶಯ್ಯನೋರು ''ಅಲ್ವೇ ಕಮಲೂ, ಆ ಹುಡುಗೀಗೆ ಹಾಗೇಕ್ಮಾಡ್ದೀ'' ಅಂದಾಗ, ''ಅಯ್ಯೋ ನೀವೊಂದು ಪೆಚ್ಚು. ಅವಳು ಬಸುರಿ ಅಂತ ಗೊತ್ತಾಗಲಿಲ್ಲವೇನ್ರೀ. ಈಗ ನನ್ನ ಲೇಹ್ಯ ಮೂಸಿದ್ದಾಳಲ್ಲಾ ಅಷ್ಟೇ ಸಾಕು ಅವಳಿಗೆ ಹೆರಿಗೆ ಸುಖವಾಗಿ ಆಗುತ್ತೆ'' ಅನ್ನೋದೇ? ತುಂಬಾ Boastful ಆಗ್ಬೋದ್ರೂ, ಇತ್ತೀಚೆಗೆ ನಮ್ಮ ಕಮಲಾಬಾಯೀ.

ಕಮಲಾಬಾಯೀ ಕೈಚಳಕ, ಚಮತ್ಕಾರ ಕೇಳಿದ ಅಲ್ಲಿನ ಇತರೇ ಕನ್ನಡಿಗರೂ ''ನಮಗೂ ನೀವೇ ಬಾಣಂತನ ಮಾಡ್ಸೀ ಆಂಟೀ'' ಅಂತ ಕೇಳ್ಕೊಳ್ತಿದ್ದಾರಂತೆ.

ಈ ಡಿಮಾಂಡ್ ತುಂಬಾ ಆಗಿಹೋಗಿ ಕಮಲಾಬಾಯಿ ತಮ್ಮ ಮೂರನೇ ಮಗಳ ಮನೇಲೇ ಒಂದು ಏಜೆನ್ಸೀ ತೆಗೆದಿದ್ದಾರಂತೆ. ಆ ಮಗಳು ಶಾಂತಿ ತನ್ನ ಮನೇ ಮುಂದೆ ತಮ್ಮ ತಾಯಿಯ ಫ್ರೀ ಡೇಟ್ಸ್ ಯಾವ ಯಾವುದೂಂತ ಒಂದು chart ಹಾಕಿದಾಳಂತೆ. ನಮ್ಮ ಬೆಂಗಳೂರು ಕಲ್ಯಾಣ ಮಂಟಪಗಳಲ್ಲಿ ಹಾಕಿರ್ತಾರೆಲ್ಲಾ ಆ ಥರ. ಈ chart e-mail ನಲ್ಲೂ ಇದೇಂದ್ರು ಒಬ್ರು.

ಅಲ್ಲಿಗೆ ಬರೋ ಕಮಲಾಬಾಯೀ ಕ್ಲೈಂಟ್ಸ್ ಎಲ್ಲಾ ಆ ಫ್ರೀ ಡೇಟ್ಸ್ ನೋಡ್ಕೊಂಡು ಬುಕ್ ಮಾಡಿ, ಕಮಲಾಬಾಯಿ ಕಾಲ್‌ಶೀಟ್ ತೊಗೊಂಡು ಆಮೇಲೇ ತಮ್ಮ ಬಾಣಂತನ ಪ್ಲಾನ್ ಮಾಡ್ತಾರಂತೆ. ಮಗೂ ಹುಟ್ಬೋಕ್ ಮುಂಚೆ ಸ್ಕೂಲ್ ಸೀಟ್ ರಿಸರ್ವ್ ಮಾಡೋಲ್ವೆ ಇಲ್ಲೀ, ಅದೇ ಥರ.

ಕಮಲಾಬಾಯೀ ಕಾಲ್ ಶೀಟ್ಗೆ ಡಿಮಾಂಡ್ಸ್ ಜಾಸ್ತಿ ಆದಂತೆ, ಅವರ ಡಿಮಾಂಡ್ಸೂ ಜಾಸ್ತಿ ಆಗಿದೆ. ಪಟ್ಟೀ ಹೀಗಿದೆ:


1. ತಮ್ಮ ಸಂಭಾವನೇನ ಡಾಲರ್ಸ್‌ನಲ್ಲೇ ಕೊಡಬೇಕು.
2. ತಮಗೂ ತಮ್ಮ ಗಂಡನಿಗೂ fully furnished room ಇರಬೇಕು.
3. Week ends ರಜ, ತಮ್ಮ ಮಕ್ಕಳ ಮನೇಗೆ ಹೋಗೋಕೆ.
4. ಲೇಹ್ಯದ ಬಾಟಲ್ಸ್‌ಗೆ Extra charges.

ಇಷ್ಟಾದ್ರೂ ಇವರ ಕಾಲ್‌ಶೀಟ್ ಸಿಗದೇ ಬಹಳಷ್ಟು ಜನ ಹೋಗಲೀ ನಿಮ್ಮ ಲೇಹ್ಯಾನಾದ್ರೂ ಕೊಡೀ ಅಂಟೀಂತ ಕೊಂಡು ಹೋಗ್ತಾರಂತೆ. ಬೆಂಗಳೂರಿನ ಕನಕನ ಪಾಳ್ಯದಲ್ಲಿ ಅವರ ಮನೇಲಿ ಅವರ ದೊಡ್ಡ ಮಗ ವೆಂಕಟಶಾಮಿ ಒಂದು ಲೇಹ್ಯದ ಫ್ಯಾಕ್ಟರೀನೇ ತೆಗೆದಿದ್ದಾನೆ. ಅದರ ಗುಟ್ಟು ಯಾರಿಗೂ ಬಿಟ್ಟುಕೊಟ್ಟಿಲ್ಲ.

ನಾನಿನ್ನೂ ಮುಗಿಸೇ ಇಲ್ಲಾ, ಆಗಲೇ ARP ಗುಂಪು ಮೆತ್ತಗೆ melt ಆಗಿ ಹೋಯಿತು. ಇನ್ನೊಬ್ಬರು ಮಾತಾಡುವಾಗ ಕೇಳ್ಬೇಕು ಅನ್ನೋ ಸೌಜನ್ಯಾನೇ ಬೇಡ್ವೇ?

ಆಮೇಲೆ ಉಳಿದೋರು ನಾವಿಬ್ರೇ. ನನ್ನೋಳು ನನ್ನ ತರಾಟೆಗೆ ತೊಗೊಂಡ್ಳು; "ಇದೇನ್ರೀ ನಿಮ್ಮ ಅವತಾರ? ಇದ್ಯಾವ ಕಮಲಾಬಾಯೀ ಇವಳು. ನಿಮಗೆ ಹೇಗ್ರೀ ಗೊತ್ತಾಯಿತೂ ಇವೆಲ್ಲಾಂತ" ಅಮ್ಮರಿಸಿಕೊಂಡ್ಳು ಅಲ್ಲೇ. ನಾನು ಮೆಲ್ಲಗೆ "ಲೇ ಕೂಗ್ಬೇಡ್ವೇ ಎಲ್ಲಾರ್ಗೂ ಕೇಳಿಸೋ ಹಾಗೆ. ಇವೆಲ್ಲಾ ನನ್ನ ARP onslaught control ಮಾಡೋ ಪ್ಲಾನ್ಸ್. ಇದಿಲ್ಲದಿದ್ರೇ ನನ್ನಂಥಾ ಬಡಪಾಯಿ Non APRS ಗತಿ ಏನು? ನಾವೆಲ್ಲಿಗೆ ಹೋಗ್ಬೇಕು? ನಾನೂ ನಮ್ಮ ಬದುಕಿಗೆ ಪ್ಲಾನ್ಸ್ ಮಾಡ್ಕೋ ಬೇಕಮ್ಮಾ ಇಂಥಾ Environments ಗಳಲ್ಲಿ" ಅನ್ನೋಣ.

"ನೀವೋ ನಿಮ್ಮ ಮೆಥೆಡ್ಸೋ. ಆ ದೇವರೇ ಕಾಪಾಡಬೇಕು ನನ್ನ" ಅಂತಾ ಹೊರಟ್ಳು. ನಾನೂ ಅವಳ ಬಾಲದಂತೆ ಹಿಂಬಾಲಿಸಿದೆ ಒಳಗೊಳಗೇ ನಗುತ್ತಾ.



"ನಸೀರುದ್ದೀನ್‌ಷಾಗೆ ಡಬಲ್ ಆಗ್ತೀನಿ ಅಂದೆ. ಆದ್ರೂ ಛಾನ್ಸ್ ಸಿಗಲಿಲ್ಲ."

ಎಂ.ಎಸ್.ನಲ್ಲಿ ನಾಲ್ಕನೇ!

(ನಮ್ಮ ಸ್ವಂತ ಭೇಟಿದಾರನಿಂದ)

– ರಾ.ಶಿ.

ನಮ್ಮ ಸಂಪಾದಕರ ಕ್ರೂರ ಅಪ್ಪಣೆಯ ಮೇರೆಗೆ ನಾನು ಎಂ.ಎಸ್. ನಲ್ಲಿ ಈ ಸಾರಿ ನಾಲ್ಕನೇ ಬಾರಿಗೆ ನಪಾಸಾದ ಸಾಹಸಿ ವಿದ್ಯಾರ್ಥಿಯ ಭೇಟಿಮಾಡಲು ಅಡಿಕೆ ತೋಟದ ಬಳಿ ಇದ್ದ ಅವನ ಮನೆಗೆ ಬೆಳಿಗ್ಗೆ 10 ಗಂಟೆ ಹೊತ್ತಿಗೆ ಹೋದೆ. ಆಗ ತಾನೇ ವಿದ್ಯಾರ್ಥಿಯು ಕೊಳಗದಲ್ಲಿ ಕಾಫಿ ಕುಡಿಯುತ್ತಿದ್ದ. ನನ್ನ ಮುಖವನ್ನು ನೋಡಿ ''ಇವನೇ ಇರಬೇಕು ಪತ್ರಿಕಾ ಭೇಟಿಗಾರ, ನನ್ನ ಭೇಟಿಗೆ ಕಾತುರನಾಗಿ ಬಂದಿದ್ದಾನೆ'' ಎಂದು ತಿಳಿದುಕೊಂಡು ಹಸನ್ಮುಖಿಯಾದ. ''ಕ್ಯಾಮರಾ ತರಲಿಲ್ಲವೇ? ಫೋಟೋ ತೆಗೆದುಕೊಳ್ಳಲಿಕ್ಕೆ'' ಎಂದು ಕೇಳಿದ. ಆಗಲೇ ಅವನ ಚಾಣಾಕ್ಷ ಬುದ್ಧಿಯನ್ನು ಕಂಡು ಸುಸ್ತಾದೆ. ಇಷ್ಟು ಬುದ್ಧಿವಂತ ಪ್ರತಿಭಾಶಾಲಿ ಇವನು ಹೇಗೆ ನಾಲ್ಕು ಬಾರಿ, ಈ ಎಂ.ಎಸ್. ನಲ್ಲಿ, ಅಂದರೆ ಈ ಲೋಫರ್ ಸೆಕಂಡರೀಲಿ, ನಪಾಸಾದ. ಎಂದು ಆಶ್ಚರ್ಯಪಟ್ಟೆ.

'ಕ್ಯಾಮರಾ ಇಲ್ಲ' ಆದರೆ ಫೋಟೋ ಇದ್ದರೆ ಕೊಡಿ. ಭೇಟಿವರದಿ ಜತೆಗೆ ಹಾಕುತ್ತೇನೆ ಎಂದೆ.

''ಓಹೋ! ಹೀಗಾಗಬಹುದು ಅಂತ ತಿಳಿದುಕೊಂಡೇ ನನ್ನ ಚೌಲದಲ್ಲಿ ತೆಗೆದ ಫೋಟೋ ಪ್ರತಿ ಮಡಗಿದ್ದೇನೆ. ಸ್ವಲ್ಪ ಮೀಶೆ ಬಳಿದರೆ ನನ್ನ ಈಗಿನ ರೂಪಿಗೆ ತದ್ವತ್ ಸಹಜವಾಗುತ್ತೆ. ಈಗ ನಿಮ್ಮ ಪ್ರಶ್ನೆಗಳನ್ನು ಕೇಳಿ'' ಎಂದ.

ಎಷ್ಟು ಧೈರ್ಯವಾಗಿದ್ದಾನೆ ಈ ಎಂ.ಎಸ್. ವಿದ್ಯಾರ್ಥಿ, ಎಂದೆನ್ನಿಸಿತು. ಸ್ವಲ್ಪವಾದರೂ ದೊಡ್ಡವರು ಅಂತ ಹೆದರುವುದೇ ಇಲ್ಲವಲ್ಲಾ! ಇಂತಹವರಿಂದಲೇ ಭಾರತದ ಭವಿಷ್ಯ ರಚಿತವಾಗಬೇಕು ಅಂದ ಮೇಲೆ ಭವಿಷ್ಯ ಭದ್ರ ಎಂದೂ ಧೈರ್ಯ ಬಂತು - ನನಗೆ-

ಮೊದಲನೆಯಸಾರಿ ನಪಾಸಾಗಲು ಕಾರಣವೇನು?

ಈ ಸಾರಿ ಎದುರು ಕೂತಿದ್ದವನ ಉತ್ತರಗಳನ್ನೇ ನಾನು ಬರೆದೆ. ಅವನಿಗೆ ರ್‍ಯಾಂಕ್ ಬಂತು. ನನ್ನ ನಂಬರು ಉತ್ತೀರ್ಣ ಪಟ್ಟಿಯಲ್ಲಿ ಬರಲೇ ಇಲ್ಲ. ನನ್ನ

ಬರಹ ಸ್ವಲ್ಪ ಮೋಟಿ. ಮನಸ್ಸು ಓಡಿದಷ್ಟು ಬೇಗವಾಗಿ ಬೆರಳು, ಲೇಖನಿ, ಓಡುವುದಿಲ್ಲ. ಹಾಗಾಗಿ ಅಕ್ಷರಗಳು ಅರ್ಥವಾಗದೆ ನನಗೆ ನಪಾಸಾಗಿರಬಹುದು ಎಂದುಕೊಂಡೆ. ಮುಂದಿನ ವರ್ಷ ಬರವಣಿಗೆ ಸ್ಫುಟಗೊಳಿಸುವುದರಲ್ಲೇ ತಲ್ಲೀನನಾದೆ. ಈಗ ನಾನು ಬರೆದರೆ ಮುತ್ತು ಎಂದು ಹೇಳಿದ.

''ಎಲ್ಲಿ ನಿನ್ನ ಹೆಸರು ವಿಳಾಸ ಬರಿ'' ಎಂದೆ.

ಬರೆದು ಕೊಟ್ಟ ಕಾಗದದ ಮೇಲೆ. ಕೋತೀಗೆ ಕೋತಿ ಮುತ್ತು ಕೊಟ್ಟ ಹಾಗೇ ಇತ್ತು ಅವನ ಮುತ್ತಿನ ಅಕ್ಷರ.

''ಎರಡನೆಯ ವರ್ಷ ಹೇಗೆ ನಪಾಸಾದೆ'' ಎಂದೆ.

''ಎರಡನೆಯ ವರ್ಷ ಪರೀಕ್ಷೆ ಹೊತ್ತಿನಲ್ಲೇ ನನ್ನ ದಾಯಾದಿ ಮದುವೆ ಆಯಿತು. ರಾತ್ರಿಯೆಲ್ಲಾ ಇಸ್ಪೀಟ್ ಆಡಬೇಕಾಗಿ ಬಂತು. ಬೆಳಿಗ್ಗೆ ಮುಖ ತೊಳೆದುಕೊಂಡು ಪರೀಕ್ಷೆಗೆ ಊಟಮಾಡಿ ಹೋಗಿ ಒಂದು ಹಾಳೆ ಬರೆದೆ. ಝಕಾಯಿಸಿಕೊಂಡು ನಿದ್ರೆ ಬಂತು ಮೇಜಿನ ಮೇಲೆ ಮೊಣಕೈ ಇಟ್ಟು ಅದಕ್ಕೆ ತಲೆಕೊಟ್ಟು ಒಂದು ಐದು ನಿಮಿಷ ಮಲಗಿ ಎಚ್ಚೆತ್ತು ತಿಳಿ ಬುದ್ಧಿಯಿಂದ ಬರೆಯೋಣ ಎಂದು ತೂಕಡಿಸಿದೆ. ಎಚ್ಚರವಾದಾಗ ಗಂಟೆ ಹೊಡೆಯುತ್ತಿತ್ತು. 'ಕೊಡು ನಿನ್ನ ಉತ್ತರದ ಪೇಪರ್‌ನ ಅಂತ' ಪರೀಕ್ಷಾರಕ್ಷಕ ನನ್ನ ಒಂದು ಹಾಳೆ ಉತ್ತರವನ್ನೇ ಕಸಿದುಕೊಂಡು ಹೋದರು. ನಮ್ಮೂರಿನಲ್ಲಿ ಮದುವೆ ಏಳು ದಿನ ಸಾಂಗವಾಗಿ ಮಾಡ್ತಾರೆ. ಆದರೆ ಪರೀಕ್ಷೆ ಐದು ದಿನ ನಡೆಯಿತು. ಮದುವೆ ಆದ ಮೇಲೆ ಪರೀಕ್ಷೆ ಬಂದಿದ್ದರೆ ರ್‍ಯಾಂಕ್ ಗಿಟ್ಟಿಸಬಿಡುತ್ತಿದ್ದೆ. ಅಷ್ಟು ಚೆನ್ನಾಗಿ ಓದಿದ್ದೆ ಅಷ್ಟು ಚೆನ್ನಾಗಿ ಬರವಣಿಗೆ ಸ್ಫುಟಗೊಳಿಸಿದ್ದೆ.'' ಎಂದ.

''ಮೂರನೆಯ ಸಾರಿ ನಪಾಸಾದ ಬಗೆ'' ಎಂದೆ.

'ಅದು ದೇವರ ಕೆಲಸ. ಮಾಯೆ ಅಂತಾರಲ್ಲ ಅದು ಆವರಿಸಿಕೊಂಡುಬಿಡ್ತು. ನನ್ನೆದುರು ಬೆಂಚಿನಲ್ಲಿ ಒಬ್ಬ ಚೂಟಿ ಪಿಲ್ಟು ಬಲು ಶಹಣೆ ಹುಡುಗ. ಅವನು ಬರೆದಿದ್ದನ್ನು ನಾನು ಬರೆದರೆ ಖಂಡಿತ ರ್‍ಯಾಂಕು ಅಂತ ಧೈರ್ಯ ಬಂದಿತ್ತು. ಪ್ರಶ್ನೆಪತ್ರಿಕೆ ಕೊಟ್ಟ ಹತ್ತು ನಿಮಿಷದಲ್ಲಿ ಅವನು ಒಂದು ಪ್ರಶ್ನೆಗೆ ಉತ್ತರ ಮುಗಿಸುತ್ತಿದ್ದ. ಅವನ ಕೈ ಓಡಿಸಿದಂತೆಯೇ ನಾನೂ ಓಡಿಸಿ, ಅವನಂತೆಯೆ ನಾನೂ ಒಂದು ಗಂಟೆಯಲ್ಲಿ ಉತ್ತರ ಪತ್ರಿಕೆ ಮುಗಿಸಿ ಅವನಾದ ಮೇಲೆ ನಾನೂ ಅದನ್ನು ಒಪ್ಪಿಸಿ ಹೊರಕ್ಕೆ ಬಂದೆ. ಪರೀಕ್ಷೆಯ ಐದು ದಿನಗಳೂ ಹಾಗೆಯೇ ಮಾಡಿದೆ.

''ಮತ್ತೆ ಏಕೆ ಪಾಸಾಗಲಿಲ್ಲ''

''ಅವನ ರಿಸಲ್ಟ್ ಬರಲೇ ಇಲ್ಲ'' ನಾನು Absent ಅಂದರು.

''ಅರೆ! ಅವ ಶಹಣೆ ಹುಡುಗ ಅಂದೆ''

''ಹೌದು! ಅವ ಶಹಣೆ ಅಂತಲೇ ಅವರಪ್ಪ ಡೈರೆಕ್ಟರಿಗೆ ಪತ್ರ ಬರೆದರು. ಒಂದೇ ನಂಬರ್ ಬರೆದೀದು ಒಂದೇ ತರಹಾ ಬರೆದಿರೋದು ಎರಡು ಉತ್ತರ ಪತ್ರಿಕೆಗಳು ಬಂದಿವೆ. ಅಂದಮೇಲೆ ಒಬ್ಬರದೊಬ್ಬರು 'ಕಾಪಿ' ಮಾಡಿದ್ದಿರಬೇಕು ಎಂದು ಇಬ್ಬರನ್ನೂ ನಪಾಸ್ ಮಾಡಿಸಿದೆ ಅಂತ ಅವರು ಬರೆದರು.''

''ಅದು ಹೇಗಯ್ಯಾ! ಸಾಧ್ಯ!''

''ಅಯ್ಯೋ! ಹೇಳೋದು ಮರೆತೆ. ಅದಕ್ಕೇ ಮಾಯೆ ಅಂದಿದ್ದು ದೇವರ ಕೈವಾಡ ಎಂದಿದ್ದು. ಪತ್ರಿಕೆಯ ಮೇಲೆ ಅವನು ಅವನ ನಂಬರು ಬರೆದ. ಅದನ್ನೇ ನಾನೂ ಬರೆದೆ ನನ್ನ ಪತ್ರಿಕೆಯ ಮೇಲೆ.''

''ಕಡೆಗೇನಾಯಿತು ಆ ಹುಡುಗನಿಗೆ?''

'ಅವರಪ್ಪ ಬಿಡಲಿಲ್ಲ. ಕಡೇತನಕ ಕಾದಾಡಿ ಹೀಗೀಗಾಗಿರಬಹುದು ಎಂದರು. ಕಡೆಗೆ ಅಧಿಕಾರಿಗಳು ಒಪ್ಪಿ ಅವನ ರಿಸಲ್ಟ್ ಹೊರಗೆಡವಿದರು. ಎರಡನೇ ರ್‍ಯಾಂಕು ಬಂದಿತ್ತು ಆ ಹುಡುಗನಿಗೆ.

''ದಿಟ ದಿಟ ಇದು ದೇವರ ಮಾಯೇನೇ ಸರಿ! ಆದರೆ ನಾಲ್ಕನೇ ವರ್ಷ ಈ ಸಾರಿ ನಪಾಸಾಗಲು ಕಾರಣ?''

''ಅದು ನಮ್ಮಪ್ಪನ ತಪ್ಪು ಅವರು ಬರುತ್ತಿದ್ದಾರೆ ತೋಟದಿಂದ ಅವರನ್ನು ಕೇಳಿ'' ಎಂದು ತೊಟದಿಂದ ಆ ಹೊತ್ತಿಗೆ ಬಂದ ತಂದೆಯವರಿಗೆ ನನ್ನನ್ನು ಭೇಟಿ ಮಾಡಿಸಿದ.

ಟವಲನ್ನೇ ಕೋರೆ ರುಮಾಲಿನ ಹಾಗೆ ತಲೆಗೆ ಕಟ್ಟಿದ್ದರು ಅವರು. ದೃಢಕಾಯ. ಆದ್ದರಿಂದಲೇ ಅವರ ದೃಢವಾದ ಮೀಶೆಯನ್ನು ಆತ ಹೊರಲು ಸಾಧ್ಯ ಎನ್ನಿಸಿತು. ಇಲಿಯನ್ನು ಹುಲಿ ನೋಡುವಂತೆ ನನ್ನನ್ನು ನೋಡಿ,

''ನೀವೇನೂ ಮಾಸ್ತರಲ್ಲ ತಾನೇ'' ಎಂದು ಗುಟರಿದ.

''ಇಲ್ಲಪ್ಪಾ! ಇಲ್ಲಾ! ಅದಕ್ಕೂ ಹೀನವಾದ ಪತ್ರಿಕೋದ್ಯಮಿ. ಕಂಡವರ ಭೇಟಿ ಪಡೆದು ಅದನ್ನು ಪ್ರಕಟಿಸಿ ಹೊಟ್ಟೆ ಹೊರೆದುಕೊಳ್ಳುವ ಜೀವ'' ಎಂದೆ.

''ಕೋಪಿಸಿಕೊಂಡೆ ಎಂದು ತಿಳಿದುಕೋಬೇಡಿ. ಇವನ ಮಾಸ್ತರು ನನ್ನನ್ನು ಕಂಡಾಗಲೆಲ್ಲ ನಿಮ್ಮ ಹುಡುಗ ಓದುವುದಿಲ್ಲ. ಪರೀಕ್ಷೆಗೇ ಕೂಡುವುದಿಲ್ಲ. ಜಾಣ ಸುಮ್ಮಗೆ ಕೂತರೆ ಪ್ಯಾಸಾಗುತ್ತೆ. ಶಾಲೆಗೆ ಒಳ್ಳೇ ಹೆಸರು ಬರುತ್ತೆ ಎಂದು ಹೊಡೆದುಕೊಳ್ಳುತ್ತಾರೆ.

ಶ್ರೀ ನಿತ್ಯಾನಂದ ಪ್ರಿಂಟರ್ಸ್

46, 4ನೇ ಅಡ್ಡರಸ್ತೆ, ಅಶೋಕನಗರ, ಬನಶಂಕರಿ 1ನೇ ಹಂತ,
ಬೆಂಗಳೂರು-560 050. ದೂರವಾಣಿ : 652 60 27

ಪ್ರಕಟಣಪೂರ್ವ ಬೆಲೆಯಲ್ಲಿ

ಕಗ್ಗಕ್ಕೊಂದು ಕೈಪಿಡಿ

(ಡಿ.ವಿ.ಜಿ. ಅವರ 'ಮಂಕುತಿಮ್ಮನ ಕಗ್ಗ'ದ ಸವಿವರ ತತ್ತ್ವದರ್ಶನ)

ಲೇಖಕರು

ಶ್ರೀ ಡಿ. ಆರ್. ವೆಂಕಟರಮಣನ್

(ಡಿ.ವಿ.ಜಿ. ಅವರ ಆಪ್ತವಲಯದವರು)

ಪುಸ್ತಕ ಬಿಡುಗಡೆ

ಭಾನುವಾರ, ಮಾರ್ಚ್ 19, 2000, ಬೆಳಗ್ಗೆ 10 ಘಂಟೆಗೆ

ಸ್ಥಳ

ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ

ಬುಲ್ ಟೆಂಪಲ್ ರಸ್ತೆ, ಎನ್. ಆರ್ ಕಾಲೋನಿ, ಬೆಂಗಳೂರು-19

ಪುಟಗಳು : 550 (ಅಂದಾಜು)

ಆಕಾರ : ಡೆಮ್ಮಿ ಅಷ್ಟದಳ, ವರ್ಣರಂಜಿತ ಮುಖಪುಟ

ಮುಖಬೆಲೆ : ರೂ. 225/-

ಪ್ರಕಟಣಪೂರ್ವ ಬೆಲೆ : ರೂ. 150/-

ಪ್ರತಿಗಳನ್ನು ಕಾದಿರಿಸಲು ಕಡೆಯ ದಿನಾಂಕ : 10, ಮಾರ್ಚ್ 2000

ಸೂಚನೆ :

೧. ಡಿ.ಡಿ. ಅಥವಾ ಎಂ.ಓ. ಅನ್ನು 'ಶ್ರೀ ನಿತ್ಯಾನಂದ ಪ್ರಿಂಟರ್ಸ್, ಬೆಂಗಳೂರು' ಹೆಸರಿಗೆ ಕಳಿಸಿ ಪ್ರತಿಗಳನ್ನು ಕಾದಿರಿಸಿರಿ.

೨. ಪರಸ್ಥಳದವರು ಡಿ.ಡಿ. ಅಥವಾ ಎಂ.ಓ. ಮೂಲಕ ಮಾತ್ರ ಹಣವನ್ನು ಪಾವತಿ ಮಾಡಬೇಕಾಗಿ ಕೋರಿಕೆ.

೩. ರಶೀದಿ / ಸ್ವೀಕೃತಿ ಪತ್ರ ತಂದು ಗ್ರಂಥಪ್ರತಿಯನ್ನು ಪ್ರಕಾಶಕರಿಂದ ಪಡೆಯಿರಿ. ಪರಸ್ಥಳದವರಿಗೆ ಅಂಚೆ / ಕೊರಿಯರ್‌ನಲ್ಲಿ ಗ್ರಂಥವನ್ನು ಕಳಿಸಿಕೊಡಲಾಗುವುದು.

ಮಡಿ ಸುಬ್ಬಮ್ಮನ ಕಾಶೀಯಾತ್ರೆ

– ಬೇಲೂರು ರಾಮಮೂರ್ತಿ

ಮಡಿ ಮಡಿ ಮಡಿ ಎಂದು ಅಡಿಗಡಿಗ್ಹಾರುವೆ... ಮಡಿ ಮಾಡುವ ಬಗೆ ಬೇರುಂಟೇ ಅಂತ ಹಾಡಿಕೊಂಡೇ ಸುಬ್ಬಮ್ಮ ಮಡಿ ಮಾಡಿಕೊಂಡು ಬಂದಿದಾಳೆ. ಬೇರೆ ಯಾವ ವಿಚಾರನಾದ್ರೂ ಅವಳು ಸಹಿಸಿಕೊಂಡಾಳು. ಆದರೆ ಮಡಿ ವಿಚಾರದಲ್ಲಿ ಹೆಚ್ಚೂಕಮ್ಮಿಯಾಗಿಬಿಟ್ರೆ ಸಖತ್ತಾಗಿ ಕೆಂಡ ಕಾರ್‍ತಾಳೆ. ಒಂದು ರೀತಿ ನೀತಿ ಇಲ್ಲ, ಮಡಿ ಮೈಲಿಗೆ ಇಲ್ಲ ಅನ್ನುತ್ತಾ ಸೊಸೆ ಮೇಲೂ, ಮೊಮ್ಮಕ್ಕಳ ಮೇಲೂ ರೇಗಾಡ್ತಾ ಇರೋದು ಸರ್ವೇ ಸಾಮಾನ್ಯವಾಗಿ ಹೋಗಿದೆ. ಮಗನಂತೂ ಅವಳ ಮಾತು ಕಿವಿಮೇಲೆ ಹಾಕ್ಕೊಂಡೋನಲ್ಲ. ಅಮ್ಮಾ ನಿನ್ನ ಕಾಲ ಮುಗೀತು... ಈಗ ಮಕ್ಕಳ ಕಾಲ ಅವು ಹೇಗೆ ಬೇಕೋ ಹಾಗಿರ್‍ಲಿ ಅಂದ್ರೆ ಸುಬ್ಬಮ್ಮ ಕೇಳೋ ಹಾಗಿಲ್ಲ. ಈಚೀಚೆಗೆ ಸುಬ್ಬಮ್ಮ ಒಂದು ಹೊಸಾವರಸೆ ತೆಗೆದು ನೀವು ಹೀಗೆಲ್ಲ ಮಾಡ್ತಿದ್ರೆ ನಾನು ಕಾಶಿಗೋ, ರಾಮೇಶ್ವರಕ್ಕೋ ಹಾಳಾಗಿ ಹೋಗ್ತೀನಿ ಅಂತದ ಹೆದರಿಸ್ತಿದಾಳೆ. ಒಂದ್ಸಾರಿ ಅಂತೂ ಸೊಸೆ "ಅಷ್ಟು ಮಾಡಿ ಪುಣ್ಯ ಕಟ್ಕೊಳಿ... ನೀವು ಅಲ್ಲಿಗೆ ಹೋದ್ರೆ ಆ ವಿಶ್ವನಾಥನೂ ನಿಮ್ಮ ಕಾಟ ತಡೀಲಾರ್‍ದೆ ಕೈಲಾಸಕ್ಕೆ ಓಡಿ ಹೋಗ್ತಾನೆ. ಆಮೇಲೆ ಕಾಶಿಗೆ ಹೋದೋರೆಲ್ಲ ನಿಮಗೆ ಹಿಡಿಶಾಪ ಹಾಕ್ತಾರೆ" ಅಂದುಬಿಟ್ಟಳು. ಮಗ ಸೊಸೆ ಮೊಮ್ಮಕ್ಕಳು ಹೇಳಿದ ಮಾತು ಕೇಳಿಲ್ಲ ಅಂದ್ಮೇಲೆ ಇಲ್ಲಿದ್ದು ಏನು ಪ್ರಯೋಜನ... ಹಾಳಾಗಿ ಹೋಗೋಣ ಅಂತ ಸುಬ್ಬಮ್ಮ ಕಾಶಿಗೆ ಹೋಗೋ ನಿರ್ಧಾರ ಮಾಡೇಬಿಟ್ಳು. ಆದರೆ ಒಂದು ಸಮಸ್ಯೆ ಮಗ ಸೊಸೆಗೆ ಹೇಳಿ ಹೋಗೋದೋ ಬೇಡ್ವೋ ಅನ್ನೋ ಜಿಜ್ಞಾಸೆ ಬಂತು. ನಾನು ಹೇಗೂ ಈ ಮನೇಲಿ ಬೇಡದೋಳು.... ನಾನು ಎಲ್ಲಿದ್ರೇನು... ಹೇಗಿದ್ರೇನು... ಅವರಂತೂ ನನಗೆ ಕೇರ್ ಮಾಡೋರಲ್ಲ... ಅದಕ್ಕೆ ಹೇಳದೇ ತೊಲಗಿ ಬಿಡೋದೇ ವಾಸಿ ಅಂದ್ಕೊಂಡು ಮುಹೂರ್ತಕ್ಕೆ ಕಾಯ್ತಿದ್ಲು.

ಹೀಗೇ ಇರಬೇಕಾದ್ರೆ ಅವಾಗಾವಾಗ ಅಂತ ಚೂರುಪಾರು ಆಗ್ತಿದ್ದ ಜಗಳ ಒಂದ್ಸಾರಿ ಹೆವೀಯಾಗೆ ಆಯ್ತು... ಸುಬ್ಬಮ್ಮಂಗೆ ಆಗದೇ ಹೋದದ್ದೇನು ಅಂದ್ರೆ ಮಗನೂ ಸೊಸೆ ಪರವಹಿಸಿ ತನಗೆ ಬಯ್ದಿದ್ದು. ಸೊಸೆ ಅಂದ್ರೆ, ನಾಲ್ಕು ಬೈದು ಸೇಡು ತೀರಿಸ್ಕೊಂಡು ಹೇಗೋ ಇರಬಹುದು. ಆದರೆ ಮಗನೇ ಸೊಸೆ ಪರ ಆಗಿಬಿಟ್ರೆ ಈ ಮನೇಲಿ ನನ್ನನ್ನ ಕೇಳೋರು ಯಾರು ಅಂತ ಸುಬ್ಬಮ್ಮ ಪೇಚಾಡ್ಕೊಂಡ್ಳು, ಅವತ್ತೇ ನಿರ್ಧಾರ ಮಾಡಿಬಿಟ್ಲು ಕಾಶಿಗೆ ಹೋಗೋದು. ಮತ್ತೆ ಹಿಂದಿರುಗೋದು ಬೇಡ ಅಂತ. ಯಾರಿಗೂ ಹೇಳಿ ಹೋಗೋದೂ ಬೇಡ.

Statement about ownership and other particulars about the News Paper APARANJI to be published every year in the first issue appearing after the last day of February.

Form IV

(See Rule 8)

1.	Place of Publication	Bangalore
2.	Periodicity	Monthly
3.	Printer's Name	Sri. V.R. Nath
	Nationality	Indian
	Address	44, Sampige Road, Malleswaram Bangalore - 560 003
4.	Publisher's Name	Sri. M. Shivakumar
	Nationality	Indian
	Address	36, 6th Main Road, Malleswaram Bangalore - 560 003
5.	Editor's Name	Sri. M. Shivakumar
	Nationality	Indian
	Address	36, 6th Main Road, Malleswaram Bangalore - 560 003
6.	Name and Address of Individuals who own the News Paper and Partners/Shareholders Holding more than one percent of The total capital.	Koravanji Aparanji Trust 36, 6th Main Road, Malleswaram Bangalore - 560 003

I, M. Shivakumar hereby declare that the particulars given above are true to the best of my knowledge and belief.

Sd/-

1st March 2000

M. Shivakumar
Publisher

Printed by V.R. NATH for the Publisher KORAVANJI APARANJI TRUST. Published by KORAVANJI APARANJI TURST, 36, 6th Main Road, Malleswaram, Bangalore - 560 003. PRINTED AT RAVI GRAPHICS, 49, 4th Cross, SSI Area, Rajajinagar, Bangalore - 560 010. Editor : M. SHIVAKUMAR